ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೦ Volume 160	ಬೆಂಗಳೂರು, ಬುಧವಾರ, ೦೮, ಅಕ್ಟೋಬರ್, ೨೦೨೫ (ಆಶ್ವಯುಜ , ೧೬, ಶಕವರ್ಷ, ೧೯೪೭) BENGALURU, WEDNESDAY, 08, OCTOBER, 2025 (AASHWAYUJA , 16, SHAKAVARSHA, 1947)	ಸಂಚಿಕೆ ೧೯೨ Issue 192

ಭಾಗ ೩
ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ

ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆಯ ಕ್ರೈಂ ನಂ.89/2019 ದಿನಾಂಕ: 21.07.2019

ಉಪಸ್ಥಿತರು :ಶ್ರೀ. ಡಾ. ಸಂತೋಷ್ ಕುಮಾರ್.ಜಿ ಭಾ.ಅ.ಸೇ.. ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ.

ಪಿರ್ಯಾದಿ : ಡಿವೈ.ಎಸ್.ಪಿ, ಪ್ರೊಬೆಷನರಿ, ತಿರುಮಲಶೆಟ್ಟಿಹಳ್ಳಿ ವೃತ್ತ, ಹೊಸಕೋಟೆ ಉಪವಿಭಾಗ. (ಇವರ ಪರ ಸರ್ಕಾರದ ಕಾನೂನು ಅಧಿಕಾರಿ ಕಿರಿಯ ರವರು)

ಎದುರುದಾರರು: 1) ಸಯ್ಯದ್ ಮೂಸಾ @ ಮುಜಿಬ್ ಬಿನ್ ಲೇಟ್ ಸಯ್ಯದ್ ಗೌಸ್

2) ಸಯ್ಯದ್ ತಬ್ರೇಜ್ ಬಿನ್ ಸಯ್ಯದ್ ಮೂಸಾ

3) ಸಯ್ಯದ್ ಫೈರೂಜ್ ಬಿನ್ ಸಯ್ಯದ್ ಮೂಸಾ

ಕಟ್ಟಿಗೇನಹಳ್ಳಿ ಗ್ರಾಮ, ಜಡಿಗೇನಹಳ್ಳಿ ಹೋಬಳಿ, ಹೊಸಕೋಟೆ ತಾ||

ಪ್ರಕರಣದ ಮುಖ್ಯಾಂಶಗಳು:-

1. ದಿನಾಂಕ:21.07.2019 ರಂದು ಬೆಳಿಗ್ಗೆ 10-00 ಗಂಟೆ ಹೊಸಕೋಟೆ ಉಪವಿಭಾಗದ ಡಿವೈಎಸ್‌ಪಿ ರವರು ತಿರುಮಶೆಟ್ಟಿಹಳ್ಳಿ ವೃತ್ತ, ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆಯ ಪ್ರೊಬೆಷನರಿ ಡಿವೈಎಸ್‌ಪಿ ಆದ ಶ್ರೀ ಜಗದೀಶ್ ಕೆ.ಎಸ್. ರವರಿಗೆ ಫೋನ್ ಮಾಡಿ ಕಟ್ಟಿಗೇನಹಳ್ಳಿ ಗ್ರಾಮದ ವಾಸಿಗಳಾದ ಸಯ್ಯದ್ ಮೂಸಾ @ ಮುಜಿಬ್ ಬಿನ್ ಲೇಟ್ ಸಯ್ಯದ್ ಗೌಸ್ ರವರ ವಾಸದ ಮನೆಯಲ್ಲಿ ರಕ್ತಚಂದನ ಮರದ ತುಂಡುಗಳನ್ನು ಅಕ್ರಮವಾಗಿ ಕಳ್ಳತನದಿಂದ ಸಾಗಣೆ ಮಾಡಲು ಸಂಗ್ರಹಿಸಿರುತ್ತಾರೆ, ತಾವು ಹಾಗೂ ಸಿಬ್ಬಂದಿಯವರು ಸ್ಥಳಕ್ಕೆ ಭೇಟಿಕೊಟ್ಟು ಮುಂದಿನ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ. ಅದರಂತೆ ಅನುಗೊಂಡನಹಳ್ಳಿ ಪೊಲೀಸ್ ಠಾಣೆಯ ಪಿ.ಎಸ್.ಐ ಶ್ರೀ ಮುರಳೀಧರ ಡಿ. ಮತ್ತು ತಿರುಮಶೆಟ್ಟಿಹಳ್ಳಿ, ಪೊಲೀಸ್ ಠಾಣಾ ಸಿಬ್ಬಂದಿಯವರುಗಳು ಖಾಜಿಹೊಸಹಳ್ಳಿ ಗ್ರಾಮದಲ್ಲಿ ಪಂಚಾಯ್ತಿದಾರರನ್ನು ಕರೆದುಕೊಂಡು ಸಯ್ಯದ್ ಮೂಸಾ @ ಮುಜಿಬ್ ರವರ ಮನೆಯ ಹತ್ತಿರ ಹೋಗಿ ಸದರಿ ರವರ ಮನೆಯನ್ನು ಖಚಿತ ಪಡಿಸಿಕೊಂಡು ನೋಡಲಾಗಿ ಸಯ್ಯದ್ ಮೂಸಾ ರವರ ಮನೆಯು ಮೊದಲನೇ ಮಹಡಿಯ ಮನೆಯಾಗಿದ್ದು, ಮನೆಯನ್ನು ಪಂಚಾಯಿತಿದಾರರ ಸಮಕ್ಷಮ ಕೂಲಂಕುಷವಾಗಿ ಪರಿಶೀಲಿಸಿ ಸದರಿ ಮನೆಯ ಅಡುಗೆ ಮನೆಯನ್ನು ಪ್ರವೇಶಿಸಿ ನೋಡಲಾಗಿ ಸದರಿ ಅಡುಗೆ ಮನೆಯಲ್ಲಿ ಪೂರ್ವದ ಮತ್ತು ದಕ್ಷಿಣದ ಗೋಡೆಯ

ಅರ್ಧಕ್ಕೆ ಸೆಲ್ಪ್ ಅಳವಡಿಸಿದ್ದು ಪಶ್ಚಿಮದ ಗೋಡೆಗೆ ಹೊಂದಿಕೊಂಡಂತೆ ಆಗ್ನೆಯ ದಿಕ್ಕಿಗೆ ಒಂದು ಫ್ರಿಜ್ ಅನ್ನು ಪಶ್ಚಿಮದ ಗೋಡೆಗೆ ಹೊಂದಿಕೊಂಡಂತೆ ಮೂಲೆಯಲ್ಲಿ ಇಟ್ಟಿದ್ದು ಅನುಮಾನಗೊಂಡು ಸದರಿ ಫ್ರಿಜ್ ಅನ್ನು ಪಕ್ಕಕ್ಕೆ ಸರಿಸಿ ನೋಡಿದಾಗ ಸದರಿ ಅಡುಗೆ ಮನೆಯ ದಕ್ಷಿಣದ ಗೋಡೆಯಲ್ಲಿ ಪಶ್ಚಿಮದ ಕಡೆಗೆ ಸುಮಾರು 2 ಅಡಿ ಅಗಲ ಮತ್ತು 4 ಅಡಿ ಎತ್ತರ ಗೋಡೆಯನ್ನು ಚೌಕಕಾರವಾಗಿ ಕಿಂಡಿ ಕೊರೆದಿದ್ದು ಇದರ ಮೂಲಕ ಪೊಲೀಸ್ ಸಿಬ್ಬಂದಿ ಮತ್ತು ಪಂಚರುಗಳು ಒಬ್ಬೊಬ್ಬರಾಗಿ ದಕ್ಷಿಣಾಭಿಮುಖವಾಗಿ ಒಳಕ್ಕೆ ಪ್ರವೇಶಿಸಿದಾಗ ಅಲ್ಲಿ 15X8 ಅಡಿ ವಿಸ್ತೀರ್ಣದ ಒಂದು ಅಡಗುದಾಣದಂತಹ ಕೊಠಡಿ ಇರುವುದು ಕಂಡು ಬಂದಿರುತ್ತದೆ. ಆ ಕೊಠಡಿಯಲ್ಲಿ ಕೆಲವು ಮರದ ತುಂಡುಗಳು ಮತ್ತು ಮೂರು ಜನ ಅಸಾಮಿಗಳು ಸದರಿ ರೂಂ ನಲ್ಲಿ ಬಚ್ಚಿಟ್ಟುಕೊಂಡಿರುವುದು ಕಂಡು ಬಂದಿರುತ್ತದೆ. ನಂತರ ಪಂಚರ ಸಮಕ್ಷಮದಲ್ಲಿ ಸದರಿ ಅಡಗುದಾಣದಂತಹ ಕೊಠಡಿಯಲ್ಲಿದ್ದ ಅಸಾಮಿಗಳನ್ನು ವಶಕ್ಕೆ ಪಡೆದುಕೊಂಡು ವಿಚಾರಮಾಡಲಾದ ವೇಳೆಯಲ್ಲಿ ದೊರೆತ ಮಾಹಿತಿಯಂತೆ. 01) ಸಯ್ಯದ್ ಮೂಸಾ @ ಮುಜೀಬ್ ಬಿನ್ ಲೇಟ್ ಸಯ್ಯದ್ ಗೌಸ್ 51ವರ್ಷ ವ್ಯಾಪಾರ ಮುಸ್ಲಿಂ ಜನಾಂಗ. 02) ಸಯ್ಯದ್ ತಬ್ರೇಜ್ ಬಿನ್ ಸಯ್ಯದ್ ಮೂಸಾ. 23ವರ್ಷ ವ್ಯಾಪಾರ ಮುಸ್ಲಿಂ ಜನಾಂಗ, 03) ಸಯ್ಯದ್ ಫೈರೋಜ್ ಬಿನ್ ಸಯ್ಯದ್ ಮೂಸಾ, 25ವರ್ಷ ವ್ಯಾಪಾರ ಮುಸ್ಲಿಂ ಜನಾಂಗ, ಎಲ್ಲರೂ ಕಟ್ಟಿಗೇನಹಳ್ಳಿ ಗ್ರಾಮ ಜಡಿಗೇನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು ಎಂದು ತಿಳಿಸಿರುತ್ತಾರೆ. ನಂತರ ಸದರಿ ಕೊಠಡಿಯಲ್ಲಿ ಒಂದರ ಮೇಲೆ ಒಂದರಂತೆ ರಕ್ತಚಂದನ ಮರದ ತುಂಡುಗಳಿದ್ದು ಇವುಗಳನ್ನು ಪೊಲೀಸ್ ಸಿಬ್ಬಂದಿ ಮತ್ತು ಪಂಚಾಯಿತಿದಾರರ ಸಮಕ್ಷಮ ಪರಿಶೀಲಿಸಲಾಗಿ ಅವು ಮೇಲ್ನೋಟಕ್ಕೆ ರಕ್ತಚಂದನ ಮರದ ತುಂಡುಗಳು ಎಂದು ಕಂಡು ಬಂದಿರುತ್ತದೆ. ಮರದ ತುಂಡುಗಳನ್ನು ಹೊರಕ್ಕೆ ತೆಗೆದು ಪರಿಶೀಲಿಸಲಾಗಿ ಒಟ್ಟು 45 ರಕ್ತಚಂದನ ಮರದ ತುಂಡುಗಳಿದ್ದು ಸದರಿ ಮರದ ತುಂಡುಗಳಿಗೆ ಕ್ರಮ ಸಂಖ್ಯೆ "ವಿ"01 ರಿಂದ "ವಿ"45 ವರೆಗೆ ನಂಬರುಗಳನ್ನು ಕೊಟ್ಟು ಗುರುತುಮಾಡಿದ್ದು ಅವುಗಳ ಒಟ್ಟು ತೂಕ-1442/- ಕೆ.ಜಿಗಳು ಇದ್ದು ಅಂದಾಜು ಬೆಲೆ 43,26,000/- (ನಲವತ್ತ ಮೂರು ಲಕ್ಷದ ಇಪ್ಪತ್ತಾರು ಸಾವಿರ ರೂಪಾಯಿಗಳು) ಸ್ಥಳೀಯ ಮಾರುಕಟ್ಟೆ ಬೆಲೆಯಂತೆ ಆಗಿರುತ್ತದೆ. ಸದರಿ ರಕ್ತಚಂದನ ಮರದ ತುಂಡುಗಳನ್ನು ಆರೋಪಿಗಳು ಆಂಧ್ರಪ್ರದೇಶ ರಾಜ್ಯದ ಚಿತ್ತೂರು ಜಿಲ್ಲೆಯ ಶೇಷಾಚಲಂ ಅರಣ್ಯ ಪ್ರದೇಶದಿಂದ ಕಳ್ಳತನದಿಂದ ತಂದು ಹೆಚ್ಚಿನ ಬೆಲೆಗೆ ಮಾರಾಟಮಾಡುವ ಉದ್ದೇಶದಿಂದ ಸಂಗ್ರಹ ಮಾಡಿದ್ದು ನಂತರ ಬೇರೆ ಕಡೆಗೆ ಕಳ್ಳತನದಿಂದ ಸಾಗಾಟ ಮಾಡಲು ಸಂಗ್ರಹಿಸಿಟ್ಟಿರುವುದು ಕಂಡು ಬಂದಿರುತ್ತದೆ. ಸದರಿ ರಕ್ತ ಚಂದನ ಮರದ ತುಂಡುಗಳನ್ನು ಅಮಾನತ್ತು ಪಡಿಸಿಕೊಂಡು ದಿನಾಂಕ:21.07.2019 ಮದ್ಯಾಹ್ನ 12-00 ಗಂಟೆಯಿಂದ 02-30 ಗಂಟೆಯ ವರೆಗೆ ಪಂಚನಾಮೆ ಬರೆಯಲಾಗಿರುತ್ತದೆ. ಸದರಿ ಕೊಠಡಿಯಲ್ಲಿ ಅವಿತುಕೊಂಡಿದ್ದ ಸದರಿ ಆಸಾಮಿಗಳಾದ 1) ಸಯ್ಯದ್ ಮೂಸಾ @ ಮುಜೀಬ್ ಬಿನ್ ಲೇಟ್ ಸಯ್ಯದ್ ಗೌಸ್, 02) ಸಯ್ಯದ್ ತಬ್ರೇಜ್ ಬಿನ್ ಸಯ್ಯದ್ ಮೂಸಾ, 03) ಸಯ್ಯದ್ ಫೈರೋಜ್ ಬಿನ್ ಸಯ್ಯದ್ ಮೂಸಾ. ರವರುಗಳನ್ನು ವಶಕ್ಕೆ ಪಡೆದುಕೊಂಡು ಬಂದು ಮೇಲ್ಕಂಡ ಆಸಾಮಿಗಳ ವಿರುದ್ಧ ಕರ್ನಾಟಕ ಅರಣ್ಯ ಕಾಯ್ದೆ-1963 ರ ಕಲಂ 24, 62, 80, ಕರ್ನಾಟಕ ಅರಣ್ಯ ಅಧಿನಿಯಮ 1969ರ ಕಲಂ 144, 145, ಜೊತೆಗೆ ಐ.ಪಿ.ಸಿ-1860 ಕಲಂ 379 ರೀತ್ಯಾ ಪ್ರಕರಣ ದಾಖಲುಮಾಡಿ ಮುಂದಿನ ತನಿಖಾ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ. ಅದರಂತೆ ತಿರುಮಲಶೆಟ್ಟಿ, ಹಳಿ ಪೊಲೀಸ್ ಠಾಣೆಯ ಅಪರಾಧ ಪ್ರಕರಣ ಸಂಖ್ಯೆ:89/2019 ಯನ್ನು ದಾಖಲಿಸಿಕೊಂಡಿರುತ್ತಾರೆ. ಸದರಿ ಪ್ರಕರಣದ ತನಿಖೆಯನ್ನು ಕೈಗೊಂಡ ಪೊಲೀಸ್ ಉಪ ನಿರೀಕ್ಷಕರು, ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ ರವರು ದಿನಾಂಕ:23.07.2019 ರಂದು ಸ್ಥಳ ಮಹಜರು ಮಾಡಲು ಹೋದಾಗ ಆರೋಪಿಗಳು ರಕ್ತಚಂದನ ತುಂಡುಗಳ ಸಾಗಾಣಿಕೆಗೆ ಬಳಸಲಾದ ವಾಹನದ ಬಗ್ಗೆ ನೀಡಿದ ಮಾಹಿತಿಯಂತೆ ವಾಹನ ಸಂಖ್ಯೆ:KA-04-AA-1891 ಅಶೋಕ ಲೇ ಲ್ಯಾಂಡ್ ಮಿನಿ ಗೂಡ್ಸ್ ವಾಹನವನ್ನು ಅಮಾನತ್ತು ಮಾಡಿಕೊಂಡಿರುತ್ತಾರೆ, ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ) ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿರುತ್ತಾರೆ.

2. ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ KA-04-AA-1891 ಅಶೋಕ ಲೇ ಲ್ಯಾಂಡ್ ಮಿನಿ ಗೂಡ್ಸ್ ವಾಹನದ 'B' Extract , SADAM S/o GUIZAR, #1071 Modi Road DJ Halli, Bangalore, Karnataka-560045 ರವರ ಹೆಸರಿನಲ್ಲಿ ನೊಂದಣಿಯಾಗಿರುವುದು ಕಂಡುಬಂದಿರುತ್ತದೆ. ಜಪ್ತು ವಾಹನದ ಮಾಲೀಕರಿಗೆ ಕರ್ನಾಟಕ ಅರಣ್ಯ ಕಾಯಿದೆ 1963ರ ಕಲಂ 71(ಬಿ) ರಡಿ ಕಾರಣ ಕೇಳುವ ನೋಟೀಸನ್ನು ದಿನಾಂಕ: 19.12.2019, 30.01.2020, 22.08.2022, 03.09.2022, 21.10.2022, 16.02.2023 ಹೊರಡಿಸಿ ಈ ನ್ಯಾಯಾಲಯದಿಂದ ವಾಹನದ ಮಾಲೀಕರು/ ವಾರಸುದಾರರು/ ಸಂಸ್ಥೆ ಇವರುಗಳ ಗಮನಕ್ಕೆ ತರಲಾಗಿರುತ್ತದೆ. ಈ ಬಗ್ಗೆ ವಾಹನದ ಮಾಲೀಕತ್ವದ ಬಗ್ಗೆ ಯಾವುದೇ ಸಂಸ್ಥೆ ಅಥವಾ ವ್ಯಕ್ತಿ ವಾಹನದ ಮಾಲೀಕತ್ವ ಕೋರಿ ಈ ನ್ಯಾಯಾಲಯದ ಮುಂದೆ ಹಾಜರಾಗಿರುವುದಿಲ್ಲ.

3. ಅಭಿಯೋಜನೆ ಪರ ಸಾಕ್ಷಿಗಳ ವಿಚಾರಣೆಗಾಗಿ ಜರುಗಿರುವ ನಡಾವಳಿಗಳ ದಿನಾಂಕಗಳಂದು ವಾಹನದ ವಾಹನ ಮಾಲೀಕರು, ಉತ್ತರಾಧಿಕಾರಿಗಳು ಮತ್ತು ಅವರ ಪರ ವಕೀಲರು ಹಾಜರಾಗಿ ಪ್ರಕರಣವನ್ನು ಮುಂದುವರಿಸಿಕೊಂಡು ಹೋಗಿರುವುದಿಲ್ಲ ಹಾಗೂ ಹಲವಾರು ಅವಕಾಶಗಳನ್ನು ನೀಡಿದರು ನ್ಯಾಯಾಲಯದ ಮುಂದೆ ಹಾಜರಾಗಿ ಅಭಿಯೋಜನೆ ಪರ ನುಡಿಸಲಾದ ಸಾಕ್ಷಿಗಳ ಪಾಟೀ ಸವಾಲು ಮಾಡಿರುವುದಿಲ್ಲ.

4. ಪ್ರಕರಣದ ವಾಸ್ತವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಹಾಗೂ ಲಭ್ಯವಿದ್ದ ವಿಷಯ ಸಾಮಗ್ರಿಗಳನ್ನು ಗಮನಿಸಿ ಪರಿಗಣಿಸಬೇಕಾದ ಅಂಶಗಳು ಈ ಕೆಳಗಿನಂತೆ ಇರುತ್ತದೆ.

1. ಅಶೋಕ ಲೇ ಲ್ಯಾಂಡ್ ಮಿನಿ ಗೂಡ್ಸ್ ವಾಹನದ ನೋಂದಣಿ ಸಂಖ್ಯೆ KA-04-AA-1891 ಯನ್ನು ಬಳಿಸಿ ಒಟ್ಟು 1442 ಕೆ.ಜಿ ತೂಕವುಳ್ಳ ರಕ್ತಚಂದನ ಮರದ 45 ತುಂಡುಗಳನ್ನು ಅಕ್ರಮವಾಗಿ ಸಾಗಿಸಿರುವುದು ಕಾನೂನು ವಿರುದ್ಧವಾಗಿ ಅರಣ್ಯ ಕಾಯ್ದೆ ನಿಯಮಗಳನ್ನು ಉಲ್ಲಂಘಿಸಲಾಗಿದೆಯೇ?
2. ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಬಿ) (1)ರ ಪ್ರಕಾರ ವಾಹನದ ಮಾಲೀಕರಿಗೆ ಕಾರಣ ಕೇಳುವ ನೋಟೀಸ್ ನೀಡಲಾಗಿದೆಯೇ? ಹಾಗೂ ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು /ಸಮರ್ಥಿಸಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಲಾಗಿದೆಯೇ?
3. ವಾಹನದ ಮಾಲೀಕರು 1442 ಕೆ.ಜಿ ತೂಕವುಳ್ಳ ರಕ್ತಚಂದನ ಮರದ 45 ತುಂಡುಗಳನ್ನು (ಅರಣ್ಯೋತ್ಪನ್ನ) ಸಾಗಿಸುವಲ್ಲಿ ಶಾಮೀಲಾಗಿದ್ದಾರೆ ಅಥವಾ ವಾಹನದ ಚಾಲಕ ಇಂತಹ ಅಕ್ರಮ ಕಾನೂನುಬಾಹಿರ ಕೃತ್ಯಗಳನ್ನು ಎಸಗದಂತೆ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡಿದ್ದಾರೆಯೇ?
4. ಪ್ರಕರಣದಲ್ಲಿ ಅಮಾನತ್ತುಪಡಿಸಿದ 1442 ಕೆ.ಜಿ ತೂಕವುಳ್ಳ ರಕ್ತಚಂದನ ಮರದ 45 ತುಂಡುಗಳು ಅರಣ್ಯ ಸ್ವತ್ತು ಎಂದು ಅರಣ್ಯ ಕಾಯ್ದೆಯಡಿ ಸರ್ಕಾರಕ್ಕೆ ಸೇರಿದ್ದು ಎಂಬುದಾಗಿ ಅಭಿಯೋಜನೆ ರುಜುವಾತು ಪಡಿಸಿದೆಯೇ?

-3-

5. ಅಮಾನತ್ತುಗೊಂಡು ವಾಹನ ಮತ್ತು ಅರಣ್ಯೋತ್ಪನ್ನ ಸರ್ಕಾರಕ್ಕೆ 'ಮುಟ್ಟುಗೋಲು' ಹಾಕಿಕೊಳ್ಳಬಹುದೇ?
6. ಯಾವ ಆದೇಶ ಅಥವಾ ತೀರ್ಪು?

ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ 01 ಮತ್ತು 02 : ಸಕಾರಾತ್ಮಕವಾಗಿದೆ.

ಅಂಶ 03 : ನಕಾರಾತ್ಮಕವಾಗಿದೆ.

ಅಂಶ 04 ಮತ್ತು 05 : ಸಕಾರಾತ್ಮಕವಾಗಿದೆ.

ಅಂಶ 06 : ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ

ಕಾರಣಗಳು

ಅಂಶ 01 ರಿಂದ 03 ಒಂದಕ್ಕೊಂದು ಪರಸ್ಪರ ಸಂಬಂಧಿಸಿದ್ದು, ಕಾರಣ ವಾಸ್ತವಾಂಶದ ಪುನರಾವರ್ತನೆಯನ್ನು ತಡೆಯಲು ಒಟ್ಟಾಗಿ ಚರ್ಚಿಸಲಾಗಿದೆ.

5. ದಿನಾಂಕ:21.07.2019 ರಂದು ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಕಟ್ಟಿಗೇನಹಳ್ಳಿ ಗ್ರಾಮದ ವಾಸಿಗಳಾದ ಸಯ್ಯದ್ ಮೂಸಾ @ ಮುಜಿಬ್ ಬಿನ್ ಲೇಟ್ ಸಯ್ಯದ್ ಗೌಸ್ ರವರ ವಾಸದ ಮನೆಯಲ್ಲಿ ರಕ್ತಚಂದನ ಮರದ 45 ತುಂಡುಗಳನ್ನು ಅಕ್ರಮವಾಗಿ ಕಳ್ಳತನದಿಂದ ಸಾಗಣೆ ಮಾಡಲು ಸಂಗ್ರಹಿಸಿರುತ್ತಾರೆ, ಅವುಗಳ ಒಟ್ಟು ತೂಕ 1442 ಕೆ.ಜಿ. ಇರುವುದು ಕಂಡುಬಂದಿರುತ್ತದೆ. ರಕ್ತಚಂದನ ಮರದ ತುಂಡುಗಳನ್ನು ಪರವಾನಗಿ /ರಹದಾರಿ ಪತ್ರ ಇಲ್ಲದೇ ಅಕ್ರಮವಾಗಿ ಸಾಗಣೆ ಮಾಡಲು ಸಂಗ್ರಹಿಸಿರುವ ಆರೋಪದ ಮೇಲೆ ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆಯಿಂದ ಮಾಲು ಮತ್ತು ಸಾಗಾಣಿಕೆಗೆ ಬಳಸಿದ ವಾಹನವನ್ನು ಜಪ್ತಿ ಪಡಿಸಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ. ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ) ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿರುತ್ತಾರೆ.

6. ಅಭಿಯೋಜನೆಯವರ ಪರ ಪ್ರಕರಣದ ಸಾಕ್ಷಿದಾರರಾದ ಶ್ರೀ. ಮಂಜುನಾಥ ಎ, ಸಹಾಯಕ ಸಬ್ ಇನ್ಸ್ ಪೆಕ್ಟರ್, ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ ಇವರು ದಿನಾಂಕ:10.11.2022 ರಂದು ನಡೆದ ವಿಚಾರಣೆಗೆ ಸಾಕ್ಷಿದಾರರಾಗಿ ನ್ಯಾಯಾಲಯದಲ್ಲಿ ತಮ್ಮ ಸಾಕ್ಷಿ ವಿಚಾರಣೆ ವೇಳೆ ದಾಖಲಿಸಲಾದ ಪ್ರಥಮ ವರ್ತಮಾನ ವರದಿಯಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ದಿನಾಂಕ:21.07.2019 ರಂದು ತಾನು ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣಾ ಪ್ರಭಾರದಲ್ಲಿದ್ದ ಸಂದರ್ಭದಲ್ಲಿ, ಕಟ್ಟಿಗೇನಹಳ್ಳಿ ಗ್ರಾಮದ ವಾಸಿಗಳಾದ ಸಯ್ಯದ್ ಮೂಸಾ @ ಮುಜಿಬ್ ಬಿನ್ ಲೇಟ್ ಸಯ್ಯದ್ ಗೌಸ್ ರವರ ವಾಸದ ಮನೆಯಲ್ಲಿ ರಕ್ತಚಂದನ ಮರದ 45 ತುಂಡುಗಳನ್ನು ಅಕ್ರಮವಾಗಿ ಕಳ್ಳತನದಿಂದ ಸಾಗಣೆ ಮಾಡಲು ಸಂಗ್ರಹಿಸಿರುತ್ತಾರೆಂದು ಮಾಹಿತಿ ಬಂದಿದ್ದು ಸ್ಥಳ ಶೋಧನೆ ಮಾಡಲು ಪ್ರೊಬೆಷನರಿ ಡಿವೈಎಸ್‌ಪಿ ಆದ ಶ್ರೀ ಜಗದೀಶ್ ಕೆ.ಎಸ್. ತಿರುಮಲಶೆಟ್ಟಿಹಳ್ಳಿ ವೃತ್ತ, ರವರಿಗೆ ವಾರಂಟ್ ನೀಡಿರುತ್ತಾರೆ. ಅದರಂತೆ ಅನುಗೊಂಡನಹಳ್ಳಿ ಮತ್ತು ತಿರುಮಶೆಟ್ಟಿಹಳ್ಳಿ ಪೊಲೀಸ್ ಸಿಬ್ಬಂದಿಗಳು ಪಂಚಾಯ್ತಿದಾರರೊಂದಿಗೆ ಸ್ಥಳಕ್ಕೆ ಹೋಗಿ ಮನೆಯನ್ನು ಪರಿಶೀಲನೆ ಮಾಡಲಾಗಿರುತ್ತದೆ. ಸದರಿ ಮನೆಯ ಅಡುಗೆ ಮನೆಯ ಗೋಡೆಗೆ ಕಿಂಡಿ ಕೊರೆದು ಒಂದು ಅಡಗು ತಾಣದಂತಹ ಕೊಠಡಿ ಮಾಡಿಕೊಂಡಿದ್ದು, ಸದರಿ ಕೊಠಡಿಯಲ್ಲಿ ಕೆಲವು ಮರದ ತುಂಡುಗಳು ಮತ್ತು ಮೂರು ಜನ ಅಸಾಮಿಗಳು ಇರುವುದು ಕಂಡು ಬಂದಿರುತ್ತದೆ. ಸದರಿಯವರನ್ನು ವಿಚಾರ ಮಾಡಲಾಗಿ ವಿವರ ಹೀಗಿರುತ್ತದೆ. 1) ಸಯ್ಯದ್ ಮೂಸಾ @ ಮುಜೀಬ್ ಬಿನ್ ಲೇಟ್ ಸಯ್ಯದ್ ಗೌಸ್ 2) ಸಯ್ಯದ್ ತಬ್ರೇಜ್ ಬಿನ್ ಸಯ್ಯದ್ ಮೂಸಾ 3) ಸಯ್ಯದ್ ಫೈರೋಜ್ ಬಿನ್ ಸಯ್ಯದ್ ಮೂಸಾ ಎಲ್ಲರೂ ಕಟ್ಟಿಗೇನಹಳ್ಳಿ ಗ್ರಾಮ ಜಡಿಗೇನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು ಎಂದು ತಿಳಿಸಿರುತ್ತಾರೆ. ಸದರಿ ಕೊಠಡಿಯಲ್ಲಿ ಒಂದರ ಮೇಲೆ ಒಂದರಂತೆ ರಕ್ತಚಂದನ ಮರದ ತುಂಡುಗಳನ್ನು ಜೋಡಿಸಿರುವುದು ಕಂಡು ಬಂದಿರುತ್ತದೆ. ಒಟ್ಟು 45 ರಕ್ತಚಂದನ ತುಂಡುಗಳು ಇದ್ದು ಅವುಗಳ ಒಟ್ಟು ತೂಕ-1442/- ಕೆ.ಜಿ ಆಗಿರುತ್ತದೆ. ಸದರಿ ರಕ್ತಚಂದನ ಮರದ ತುಂಡುಗಳನ್ನು ಆರೋಪಿಗಳು ಅಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯ ಶೇಷಾಚಲಂ ಅರಣ್ಯ ಪ್ರದೇಶದಿಂದ ಕಳ್ಳತನದಿಂದ ತಂದು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಸಂಗ್ರಹ ಮಾಡಿದ್ದು ನಂತರ ಬೇರೆ ಕಡೆಗೆ ಕಳ್ಳತನದಿಂದ ಸಾಗಾಟ ಮಾಡಲು ಸಂಗ್ರಹಿಸಿಟ್ಟಿರುವುದು ಕಂಡು ಬಂದಿರುತ್ತದೆ. ಅದರಂತೆ ಮಾಲನ್ನು ಅಮಾನತ್ತು ಮಾಡಿಕೊಂಡು ಆರೋಪಿಗಳನ್ನು ದಸ್ತಗಿರಿ ಮಾಡಲಾಗಿರುತ್ತದೆ. ಸದರಿ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದು, ಡಿವೈ.ಎಸ್.ಪಿ ಜಗದೀಶ್ ಕೆ.ಎಸ್ ರವರು ನೀಡಿದ ಮಾಹಿತಿಯಂತೆ ಆರೋಪಿಗಳ ಮೇಲೆ ಮೇಲ್ಕಂಡ ಆಸಾಮಿಗಳ ವಿರುದ್ಧ ಪೊಲೀಸ್ ಸಿಬ್ಬಂದಿಗಳು ಕರ್ನಾಟಕ ಅರಣ್ಯ ಕಾಯ್ದೆ - 1963 ರ ಕಲಂ 24, 62, 80 ಮತ್ತು ಕರ್ನಾಟಕ ಅರಣ್ಯ ಅಧಿನಿಯಮ 1969ರ ಕಲಂ 144, 145 ಜೊತೆಗೆ ಐಪಿಸಿ-1860 ಕಲಂ 379 ರಡಿ ದಿನಾಂಕ:21.07.2019 ರಂದು ಪ್ರಕರಣ ಸಂಖ್ಯೆ:89/2019ನ್ನು ದಾಖಲಿಸಿರುತ್ತೇನೆ ಹಾಗೂ ಅದೇ ದಿನ

ಮುಂದಿನ ತನಿಖೆಗಾಗಿ ಕಡತವನ್ನು ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆಯ ಪಿಎಸ್ಐ ರವರಿಗೆ ಹಸ್ತಾಂತರಿಸಿರುತ್ತೇನೆ. ಸದರಿ ಪ್ರಕರಣದ ತನಿಖೆಯನ್ನು ಕೈಗೊಂಡ ಶ್ರೀ ಫಾಲಾಕ್ಷಪ್ರಭು, ಪೊಲೀಸ್ ಉಪ ನಿರೀಕ್ಷಕರು, ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ ರವರು ದಿನಾಂಕ:23.07.2019 ರಂದು ಸ್ಥಳ ಮಹಜರು ಮಾಡಲು ಹೋದಾಗ ಆರೋಪಿಗಳು ರಕ್ತಚಂದನ ತುಂಡುಗಳ ಸಾಗಾಣಿಕೆಗೆ ಬಳಸಲಾದ ವಾಹನದ ಬಗ್ಗೆ ನೀಡಿದ ಮಾಹಿತಿಯಂ ವಾಹನ ಸಂಖ್ಯೆ:KA-04-AA-1891 ಅಶೋಕ ಲೇ ಲ್ಯಾಂಡ್ ಮಿನಿ ಗೂಡ್ಸ್ ವಾಹನವನ್ನು ಅಮಾನತ್ತು ಮಾಡಿಕೊಂಡಲಾಗಿರುತ್ತದೆಂದು ಸಾಕ್ಷಿ ನುಡಿದಿರುತ್ತಾರೆ.

7. ಸಾಕ್ಷಿ ವಿಚಾರಣೆಯ ವೇಳೆ ವಾಹನದ ಮಾಲೀಕರು ಗೈರು ಹಾಜರಾಗಿದ್ದು ಅಭಿಯೋಜನಪರ ನುಡಿಸಲಾದ ಸಾಕ್ಷಿಗಳನ್ನು ಪಾಟೀ ಸವಾಲು ಮಾಡಿರುವುದಿಲ್ಲ, ರಕ್ತಚಂದನದ 45 ತುಂಡುಗಳನ್ನು ಅಕ್ರಮವಾಗಿ ಸಾಗಾಣಿಕೆ ಮಾಡಲು ಬಳಸಲಾಗಿದ್ದ ವಾಹನ ನೋಂದಣಿ ಸಂಖ್ಯೆ:KA-04-AA-1891 ಅಶೋಕ ಲೇ ಲ್ಯಾಂಡ್ ಮಿನಿ ಗೂಡ್ಸ್ ವಾಹನದಲ್ಲಿ ಸಾಗಾಣಿಕೆ ಮಾಡಲಾದ ಸದರಿ ಅರಣ್ಯೋತ್ಪನ್ನದ ಮಾಲೀಕತ್ವವನ್ನು ಸಾಬೀತುಪಡಿಸಲು ವಾಹನದ ಮಾಲೀಕ ಅಥವಾ ಅವರ ಪರ ವಕೀಲರು ಸಾಕ್ಷಿ ವಿಚಾರಣೆ ವೇಳೆ ವಿಫಲರಾಗಿರುತ್ತಾರೆ.

8. ದಿನಾಂಕ:21.07.2019 ರಂದು ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ, KA-04-AA-1891 ಅಶೋಕ ಲೇ ಲ್ಯಾಂಡ್ ಮಿನಿ ಗೂಡ್ಸ್ ವಾಹನದಲ್ಲಿ ಕಟ್ಟಿಗೇನಹಳ್ಳಿ ಗ್ರಾಮದ ವಾಸಿಗಳಾದ ಸಯ್ಯದ್ ಮೂಸಾ @ ಮುಜಿಬ್ ಬಿನ್ ಲೇಟ್ ಸಯ್ಯದ್ ಗೌಸ್ ರವರ ವಾಸದ ಮನೆಗೆ ರಕ್ತಚಂದನ ಮರದ 45 ತುಂಡುಗಳನ್ನು ಅಕ್ರಮವಾಗಿ ಕಳ್ಳತನದಿಂದ ಸಾಗಣೆ ಮಾಡಿ ಸಂಗ್ರಹಿಸಿರುತ್ತಾರೆಂದು. ಸದರಿ ರಕ್ತಚಂದನ ಮರದ ತುಂಡುಗಳನ್ನು ಪರವಾನಗಿ / ರಹದಾರಿ ಪತ್ರ ಇಲ್ಲದೇ ಅಕ್ರಮವಾಗಿ ಸಾಗಾಣಿಕೆ ಮಾಡಿ ಸಂಗ್ರಹಿಸಿರುವ ಆರೋಪದ ಮೇಲೆ ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆಯಿಂದ ಮಾಲು ಮತ್ತು ವಾಹನವನ್ನು ಜಪ್ತು ಪಡಿಸಿ ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆಯ ಸಿಬ್ಬಂದಿ ಕರ್ನಾಟಕ ಅರಣ್ಯ ಕಾಯ್ದೆ-1963 ರ ಕಲಂ 24, 62, 80 ಮತ್ತು ಕರ್ನಾಟಕ ಅರಣ್ಯ ಅಧಿನಿಯಮ 1969ರ ಕಲಂ 144 145 ಜೊತೆಗೆ ಐಪಿಸಿ-1860 ಕಲಂ 379 ಉಲ್ಲಂಘನೆ ಮಾಡಿರುವುದಾಗಿ ಪ್ರಕರಣ ದಾಖಲಿಸಿಕೊಂಡಿದ್ದು, ತಿರುಮಶೆಟ್ಟಿಹಳ್ಳಿ ಪೋಲೀಸ್ ಠಾಣೆಯವರು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆಯ ವ್ಯಾಪ್ತಿಯಲ್ಲಿ ಸೆರಿರುತ್ತದೆ.

9. ಸರ್ಕಾರದ ಪರ ಅಭಿಯೋಜನಾ ಸಾಕ್ಷಿದಾರರು ಅಶೋಕ ಲೇ ಲ್ಯಾಂಡ್ ಮಿನಿ ಗೂಡ್ಸ್ ವಾಹನ ವಾಹನ ನೊಂದಣಿ ಸಂಖ್ಯೆ: KA-04-AA-1891 ರಲ್ಲಿ ಅಕ್ರಮವಾಗಿ ಒಟ್ಟು 1442 ಕೆ.ಜಿ ತೂಕವುಳ್ಳ ರಕ್ತಚಂದನ ಮರದ 45 ತುಂಡುಗಳನ್ನು ಸಾಗಣಿಕೆ ಮಾಡಿರುವ ಬಗ್ಗೆ ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ರಕ್ತಚಂದನದ ಅರಣ್ಯೋತ್ಪನ್ನದ ಮಾಲೀಕತ್ವವನ್ನು ಸಾಬೀತುಪಡಿಸುವ ಅಥವಾ ಜಪ್ತಾದ ವಾಹನವು ಸದರಿ ಕೃತ್ಯದಲ್ಲಿ ಭಾಗಿಯಾಗದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಿರುವ ಬಗ್ಗೆ ವಾಹನದ ನೋಂದಣಿ ಮಾಲೀಕರು ಅಥವಾ ಅವರ ಪರ ವಕೀಲರಿಗೆ ಸಾಕಷ್ಟು ಅವಕಾಶಗಳನ್ನು ನೀಡಿದ್ದರೂ ಸಹ ಈ ನ್ಯಾಯಾಲಯದ ಮುಂದೆ ಹಾಜರಾಗದೇ ಇರುವುದರಿಂದ ಸದರಿ ವಾಹನವು ಅರಣ್ಯೋತ್ಪನ್ನದ ಅಕ್ರಮ ಸಾಗಾಣಿಕೆಯಲ್ಲಿ ಭಾಗಿಯಾಗಿರುವುದಾಗಿ ಈ ನ್ಯಾಯಾಲಯಕ್ಕೆ ಮನದಟ್ಟಾಗಿರುತ್ತದೆ. ಆದುದರಿಂದ ಸದರಿ ವಾಹನವು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ನಿಯಮ 1969ರ ಉಲ್ಲಂಘನೆ ಮಾಡಿರುವುದು ಅಭಿಯೋಜನೆ ಪರ ಸಾಕ್ಷಿದಾರರ ಹೇಳಿಕೆಯಿಂದ ಸಂಶಯಾತೀತವಾಗಿ ಸಾಭಿತಾಗಿರುತ್ತದೆ.

10. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71(ಎ) (1) ಮೇರೆಗೆ ರಾಜ್ಯ ಸರ್ಕಾರ ಸ್ವತ್ತಾದ ರಕ್ತಚಂದನ ಮರದ 45 ತುಂಡುಗಳನ್ನು ಮತ್ತು ಅಶೋಕ ಲೇ ಲ್ಯಾಂಡ್ ಮಿನಿ ಗೂಡ್ಸ್ ವಾಹನ ನೋಂದಣಿ ಸಂಖ್ಯೆ: KA-04-AA-1891 ರಲ್ಲಿ ಪರವಾನಗಿ ಇಲ್ಲದೆ ಸಾಗಿಸಿ ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ

ಅರಣ್ಯ ಅಧಿನಿಯಮ 1969ರ ನಿಯಮಗಳನ್ನು ಉಲ್ಲಂಘನೆ ಮಾಡಿರುವ ಕಾರಣಕ್ಕೆ ತಿರುಮಲಶೆಟ್ಟಿಹಳ್ಳಿ ಪೋಲೀಸ್ ಠಾಣೆ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ಜಪ್ತಾದ ಮುದ್ದೆಮಾಲನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಹಾಜರುಪಡಿಸಿದ್ದು, ಅಂತಹ ಸ್ವತ್ತನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕಾನೂನಿನಡಿ ಅವಕಾಶವಿರುವ ಮೇರೆಗೆ ಸದರಿ ಪ್ರಕರಣದಲ್ಲಿ ಒಳಗೊಂಡಿರುವ ರಕ್ತಚಂದನ ಮರದ ತುಂಡುಗಳು ಹಾಗೂ ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆಯೆಂದು ಮನಗಂಡು ಈ ಕೆಳಕಂಡಂತೆ:

ಆದೇಶ

ನಾನು ಶ್ರೀ. ಡಾ. ಸಂತೋಷ ಕುಮಾರ್ ಜಿ, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ, ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71(ಎ) ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ (ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆ ಕ್ರ್ಯಂ ನಂ.89/2019) ರಲ್ಲಿ ಒಳಗೊಂಡಿರುವ ಅಶೋಕ ಲೇ ಲ್ಯಾಂಡ್ ಮಿನಿ ಗೂಡ್ಸ್ ವಾಹನ ನೊಂದಣಿ ಸಂಖ್ಯೆ: KA-04-AA-1891 ವಾಹನ ಹಾಗೂ ಒಟ್ಟು 1442 ಕೆ.ಜಿ ತೂಕವುಳ್ಳ ರಕ್ತಚಂದನ ಮರದ 45 ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉತ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:25-08-2025ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಗಿದೆ.

'ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ'.

ಅಧಿಕೃತ ಅಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ಗ್ರಾಮಾಂತರ ವಿಭಾಗ,
ದೇವನಹಳ್ಳಿ,

PR-1348

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ.

ಹೊಸಕೋಟೆ ಪೊಲೀಸ್ ಠಾಣೆಯ ಕ್ರ್ಯಂ ನಂ.261/2019 ದಿನಾಂಕ: 01.08.2019
ದಿ.ಎಫ್.ಓ.ಸಿ ಸಂಖ್ಯೆ:18/2019

ಉಪಸ್ಥಿತರು :ಶ್ರೀ. ಡಾ. ಸಂತೋಷ್ ಕುಮಾರ್.ಜಿ ಭಾ.ಅ.ಸೇ.. ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ.

ಪಿರ್ಯಾದಿ : ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಅಪರಾಧ ವಿಭಾಗ, ಹೊಸಕೋಟೆ ಪೊಲೀಸ್ ಠಾಣೆ.
(ಇವರ ಪರ ಸರ್ಕಾರದ ಕಾನೂನು ಅಧಿಕಾರಿ ಕಿರಿಯ ರವರು)

ಎದುರುದಾರರು: 1) ಮೋಹಿನ್ ಷರೀಫ್ ಬಿನ್ ದಸ್ತಗಿರ್ ಷರೀಫ್
2) ಅಸಾದ್ ಷರೀಫ್ ಬಿನ್ ಖಾಸಿಂ ಷರೀಫ್
3) ಉಸ್ಮಾನ್ ಷರೀಫ್ ಬಿನ್ ಬಾಬು
ಕಟ್ಟಿಗೇನಹಳ್ಳಿ ಗ್ರಾಮ, ಜಡಿಗೇನಹಳ್ಳಿ ಹೋಬಳಿ, ಹೊಸಕೋಟೆ ತಾ||

ಪ್ರಕರಣದ ಮುಖ್ಯಾಂಶಗಳು:-

1. ದಿನಾಂಕ 01/08/19 ರಂದು 6.30 ಗಂಟೆಗೆ ಆರಕ್ಷಕ ಉಪ ನಿರೀಕ್ಷಕರು, ಅಪರಾಧ ವಿಭಾಗ ಹೊಸಕೋಟೆ ಜಿ.ಮಾರುತಿ ರವರು ಹೊಸಕೋಟೆ ಪೊಲೀಸ್ ಠಾಣೆಗೆ ಹಾಜರಾಗಿ ನೀಡಿದ ದೂರಿನಲ್ಲಿ ಈ ದಿನ ದಿನಾಂಕ:1/8/2019 ರಂದು ಮದ್ಯಾಹ್ನ ಸುಮಾರು 3.00 ಗಂಟೆ ಸಮಯದಲ್ಲಿ ತಾನು ಠಾಣೆಯಲ್ಲಿದ್ದಾಗ,

ಮಾಲೂರು ಕಡೆಯಿಂದ ಬೆಂಗಳೂರು ಕಡೆಗೆ KA-05-M-8432 ಮಾರುತಿ ಓಮಿನಿ ಕಾರಿನಲ್ಲಿ ಅಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೆ ರಕ್ತ ಚಂದನ ಮರದ ತುಂಡುಗಳನ್ನು ಸಾಗಿಸುತ್ತಿರುವುದಾಗಿ ತನಗೆ ಬಂದ ಖಚಿತ ಮಾಹಿತಿಯನ್ನು ಠಾಣಾ ದಿನಚರಿಯಲ್ಲಿ ನಮೂದಿಸಿ. ಪಂಚಾಯ್ತುದಾರರನ್ನು ಹಾಗೂ ಪೊಲೀಸ್ ಸಿಬ್ಬಂದಿಯವರೊಂದಿಗೆ ಖಾಸಾಗಿ ವಾಹನದಲ್ಲಿ ಮಧ್ಯಾಹ್ನ 3-30 ಗಂಟೆಗೆ ಹೊಸಕೋಟೆ ಟೌನ್ ಲ್ಯಾಂಕೋ ಟೋಲ್ ಬಳಿ ಕಾಯುತ್ತಿದ್ದಾಗ, ಕೋಲಾರ-ಬೆಂಗಳೂರು ಎನ್ ಹೆಚ್-75 ರಸ್ತೆಯಲ್ಲಿ ಬರುತ್ತಿದ್ದ KA-05-M-8432 ಮಾರುತಿ ಓಮಿನಿ ವ್ಯಾನನ್ನು ನಾವು ತಡೆದು ನಿಲ್ಲಿಸಿ ನೋಡಲಾಗಿ ಸದರಿ ವ್ಯಾನಿನಲ್ಲಿ ಇಬ್ಬರು ಅಸಾಮಿಗಳಿದ್ದು ಅವರನ್ನು ವಶಕ್ಕೆ ಪಡೆದು ಕ್ಯಾಬಿನ್ ನಲ್ಲಿ ನೋಡಲಾಗಿ ಒಂದು ಬೆಡ್ ಶೀಟ್ ಇದ್ದು ತೆಗೆದು ನೋಡಲಾಗಿ 15 ರಕ್ತ ಚಂದನ ಮರದ ತುಂಡುಗಳು ಲೋಡ್ ಮಾಡಿರುವುದು ಕಂಡು ಬಂದ ಕಾರಣ ಸ್ಥಳದಲ್ಲಿದ್ದ ಪಂಚರ ಸಮಕ್ಷಮ ಅಸಾಮಿಗಳ ಹೆಸರು ವಿಳಾಸ ತಿಳಿಯಲಾಗಿ 1) ಮೋಹಿನ್ ಷರೀಫ್ ಬಿನ್ ದಸ್ತಗಿರ್ ಷರೀಫ್ 29 ವರ್ಷ, ಮುಸ್ಲಿಂ ಜನಾಂಗ, ವಾಸ: ಕಟ್ಟಿಗೆನಹಳ್ಳಿ, ಜಡಿಗೇನಹಳ್ಳಿ, ಹೋಬಳಿ, ಹೊಸಕೋಟೆ ತಾಲ್ಲೂಕು, 2) ಅಸಾದ್ ಷರೀಫ್ ಬಿನ್ ಖಾಸಿಂ ಷರೀಫ್ 45 ವರ್ಷ, ಮುಸ್ಲಿಂ ಜನಾಂಗ, ವಾಸ: ಕಟ್ಟಿಗೆನಹಳ್ಳಿ, ಜಡಿಗೇನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು, ಎಂದು ತಿಳಿಸಿದ್ದು ಮಾಲಿನ ಬಗ್ಗೆ ಕೇಳಿದ್ದಕ್ಕೆ ತನ್ನ ಗ್ರಾಮದ ವಾಸಿ ಉಸ್ಮಾನ್ ಷರೀಫ್ ಅವರ ಬಾಬ್ತು ಮಾರುತಿ ಓಮಿನಿ ವ್ಯಾನಿಗೆ ಅವರ ಮನೆಯಿಂದ ರಕ್ತಚಂದನದ ತುಂಡುಗಳನ್ನು ಲೋಡ್ ಮಾಡಿಸಿಕೊಟ್ಟು. ಸದರಿ ವಾಹನವನ್ನು ನೀವು ನೆಲಮಂಗಲ ಟೋಲ್ ಹತ್ತಿರ ತೆಗೆದುಕೊಂಡು ಹೋಗಿ ತಾನು ಬೈಕ್ ನಲ್ಲಿ ಹಿಂಬಾಲಿಸುತ್ತೇನೆಂದು ಹೇಳಿ ತಮಗೆ ಖರ್ಚಿಗೆ ತಲಾ 2 ಸಾವಿರ ಕೊಟ್ಟರು ಎಂದು ತಿಳಿಸಿದರು. ನಂತರ ಸದರಿ ವ್ಯಾನನ್ನು ಪರಿಶೀಲಿಸಲಾಗಿ ಬಿಳಿ ಬಣ್ಣದ್ದಾಗಿದ್ದು, ಮಾರುತಿ ಕಂಪನಿಯ ಓಮಿನಿ ವ್ಯಾನ್ ಆಗಿರುತ್ತೆ. ನಂಬರ್ ಪ್ಲೇಟ್ ಮೇಲೆ KA-05-M-8432 ನಂಬರ್ ಇರುತ್ತದೆ. ವ್ಯಾನಿನ ಒಳಗೆ ಇದ್ದ ರಕ್ತ ಚಂದನದ ಮರದ ತುಂಡುಗಳನ್ನು ಸ್ಥಳಕ್ಕೆ ಸ್ಕೇಲ್ ಅನ್ನು ತರಿಸಿ ತೂಕ ಮಾಡಿಸಲಾಗಿ ಮರದ ತುಂಡುಗಳ ತೂಕ ಉದ್ದಳತೆ ಹಾಗೂ ಸುತ್ತಳತೆ ಈ ಕೆಳಕಂಡಂತೆ ಇರುತ್ತವೆ, 1)ಉದ್ದ 109ಸೆಂ.ಮೀ, ಸುತ್ತಳತೆ 40 ಸೆಂ.ಮೀ ,16 ಕೆಜಿ ತೂಕ. 2) ಉದ್ದ 99 ಸೆಂ.ಮೀ, ಸುತ್ತಳತೆ 44 ಸೆಂ.ಮೀ, 17 ಕೆಜಿ ತೂಕ 3) ಉದ್ದ 113 ಸೆಂ.ಮೀ, ಸುತ್ತಳತೆ 36 ಸೆಂ.ಮೀ, 14 ಕೆಜಿ ತೂಕ 4) ಉದ್ದ 101 ಸೆಂ.ಮೀ, ಸುತ್ತಳತೆ 37 ಸೆಂ.ಮೀ, 15 ಕೆಜಿ ತೂಕ 5) ಉದ್ದ 109 ಸೆಂ.ಮೀ, ಸುತ್ತಳತೆ 41 ಸೆಂ.ಮೀ, 18 ಕೆಜಿ ತೂಕ 6) ಉದ್ದ 109 ಸೆಂ.ಮೀ, ಸುತ್ತಳತೆ 41 ಸೆಂ.ಮೀ, 20 ಕೆಜಿ ತೂಕ 7) ಉದ್ದ 109ಸೆಂ.ಮೀ, ಸುತ್ತಳತೆ 39 ಸೆಂ.ಮೀ, 14 ಕೆಜಿ ತೂಕ 8) ಉದ್ದ 108ಸೆಂ.ಮೀ, ಸುತ್ತಳತೆ 43 ಸೆಂ.ಮೀ, 16 ಕೆಜಿ ತೂಕ 9) ಉದ್ದ 105ಸೆಂ.ಮೀ, ಸುತ್ತಳತೆ 41 ಸೆಂ.ಮೀ, 16 ಕೆಜಿ ತೂಕ 10) ಉದ್ದ 72 ಸೆಂ.ಮೀ, ಸುತ್ತಳತೆ 38 ಸೆಂ.ಮೀ, 15 ಕೆಜಿ ತೂಕ 11) ಉದ್ದ 84 ಸೆಂ.ಮೀ, ಸುತ್ತಳತೆ 51 ಸೆಂ.ಮೀ, 19 ಕೆಜಿ ತೂಕ 12) ಉದ್ದ 103ಸೆಂ.ಮೀ, ಸುತ್ತಳತೆ 40 ಸೆಂ.ಮೀ, 16 ಕೆಜಿ ತೂಕ 13) ಉದ್ದ 102ಸೆಂ.ಮೀ, ಸುತ್ತಳತೆ 39 ಸೆಂ.ಮೀ, 16 ಕೆಜಿ ತೂಕ 14) ಉದ್ದ 101ಸೆಂ.ಮೀ, ಸುತ್ತಳತೆ 41 ಸೆಂ.ಮೀ, 14 ಕೆಜಿ ತೂಕ 15) ಉದ್ದ 102 ಸೆಂ.ಮೀ, ಸುತ್ತಳತೆ 37 ಸೆಂ.ಮೀ, 12 ಕೆಜಿ ತೂಕ, ಹೀಗೆ 15 ತುಂಡುಗಳ ಒಟ್ಟು ತೂಕ 238 ಕೆ.ಜಿ ಇದ್ದು ಅವುಗಳ ಅಂದಾಜು ಬೆಲೆ ಒಂದು ಕೆ.ಜಿ ಗೆ 4,000/-ರೂಗಳಂತೆ ಒಟ್ಟು 9,50,000 ರೂ ಹಾಗೂ ರಕ್ತ ಚಂದನದ ತುಂಡುಗಳನ್ನು ಸಾಗಿಸಲು ಉಪಯೋಗಿಸಿದ ವ್ಯಾನಿನ ಬೆಲೆ ಸುಮಾರು 1,00,000=00 ರೂಗಳು ಒಟ್ಟು ಬೆಲೆ 10,50,000=00 ರೂಗಳಾಗುತ್ತೆಂದು ಪಂಚಾಯ್ತುದಾರರು ಅಭಿಪ್ರಾಯ ಪಟ್ಟಿರುತ್ತಾರೆ. ಅವುಗಳಲ್ಲಿ ಕ್ರಮ ಸಂಖ್ಯೆ, 10 ರಲ್ಲಿನ ಮರದ ತುಂಡಿನಲ್ಲಿ ಸ್ಯಾಂಪಲ್‌ಗಾಗಿ ತುಂಡಿನ ತುದಿಯ ಬಾಗದಲ್ಲಿ ಒಂದು ಅಡಿಯಷ್ಟು ಕಟ್ ಮಾಡಿ ಬಿಳಿ ಬಟ್ಟೆ ಚೀಲದಲ್ಲಿ, ಹಾಕಿ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಲಾಯಿತಿ ಸದರಿ ಮಾಲು ಮತ್ತು ವಾಹನವನ್ನು ಪಂಚರ ಸಮಕ್ಷಮ ಸಂಜೆ 4-00 ರಿಂದ 5-30 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ, ಮೇಲ್ಕಂಡ ರಕ್ತ ಚಂದನ ಮರದ 15 ತುಂಡುಗಳು, ಸ್ಯಾಂಪಲ್ ತುಂಡು ಹಾಗೂ ಮಾಲನ್ನು ಸಾಗಿಸಲು ಉಪಯೋಗಿಸಿದ KA-05-M-8432 ಮಾರುತಿ ಓಮಿನಿ ವ್ಯಾನನ್ನು ವಶಕ್ಕೆ ಪಡೆದು ಆರೋಪಿಗಳೊಂದಿಗೆ ಠಾಣೆಗೆ ತಂದು. ಆಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೆ ರಕ್ತ ಚಂದನ ಮರದ ತುಂಡುಗಳನ್ನು ಕಳ್ಳತನದಿಂದ ಸಾಗಿಸುತ್ತಿರುವ ಮೇಲ್ಕಂಡ ಅಸಾಮಿಗಳ ವಿರುದ್ದ ಕರ್ನಾಟಕ ಅರಣ್ಯ ಕಾಯ್ದೆ-1963 ರ ಸೆಕ್ಷನ್ 24 ಮತ್ತು 62. ಹಾಗೂ ಕರ್ನಾಟಕ ಅರಣ್ಯ ಅಧಿನಿಯಮ-1969 ರ 144, 145 ಜೊತೆಗೆ ಐಪಿಸಿ-1860 ರ ಕಲಂ 379 ರೀತ್ಯ ಕೇಸು ದಾಖಲಿಸಿ ಕ್ರಮ ಕೈಗೊಳ್ಳಲು ಸೂಚಿಸಿ ನೀಡಿದ ವರದಿಯನ್ನು ಪಡೆದು ಠಾಣಾ ಮೊ.ಸಂ 261/2019 ನ್ನು

ಕರ್ನಾಟಕ ಅರಣ್ಯ ಕಾಯ್ದೆ-1963 ರ ಸೆಕ್ಷನ್ 24, 62 ಹಾಗೂ ಕರ್ನಾಟಕ ಅರಣ್ಯ ಅಧಿನಿಯಮ-1969 ರ 144, 145 ಜೊತೆಗೆ ಐಪಿಸಿ-1860 ರ ಕಲಂ 379 ರೀತ್ಯ ಪ್ರಕರಣ ದಾಖಲಿಸಿಕೊಂಡು, ನಂತರ ತನಿಖೆ ಮುಂದುವರೆಸಿ ಪಂಚನಾಮೆಯನ್ನು ಮಾಡಿ ಪ್ರಕರಣವು ಅರಣ್ಯ ವ್ಯಾಪ್ತಿಗೆ ಸೇರಿದ್ದರಿಂದ ಅಮಾನತ್ತು ಪಡಿಸಿಕೊಂಡಿದ್ದ 15 ರಕ್ತ ಚಂದನದ ತುಂಡಗಳನ್ನು ಮತ್ತು ಸಾಗಾಣಿಕೆಗೆ ಬಳಸಿದ KA-05-M-8432 ಮಾರುತಿ ಓಮಿನಿ ವ್ಯಾನನ್ನು ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ರವರಿಗೆ ನೀಡಲಾಗಿರುತ್ತದೆಂದು ಆರಕ್ಷಕ ಉಪ ನಿರೀಕ್ಷಕರು, ಕಾನೂನು ಮತ್ತು ಸುವ್ಯವಸ್ಥೆ, ಹೊಸಕೋಟೆ ಪೊಲೀಸ್ ಠಾಣೆಯವರು ಈ ನ್ಯಾಯಾಲಯದಲ್ಲಿ ವಿನಂತಿಸಿರುತ್ತಾರೆ.

2. ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ KA-05-M-8432 ಮಾರುತಿ ಓಮಿನಿ ವ್ಯಾನ ವಾಹನದ ಆರ್.ಸಿ ಪ್ರಕಾರ Syed Hafeez S/o Basha, Sanjaya urdu school, Nizama Mohalla Maluru, Karnataka-563130 ರವರ ಹೆಸರಿನಲ್ಲಿ ನೊಂದಣಿಯಾಗಿರುವುದು ಕಂಡುಬಂದಿರುತ್ತದೆ. ಅದರಂತೆ ಜಪ್ತು ವಾಹನದ ಮಾಲೀಕರಿಗೆ ಕರ್ನಾಟಕ ಅರಣ್ಯ ಕಾಯಿದೆ 1963ರ ಕಲಂ 71(ಬಿ) ರಡಿ ಕಾರಣ ಕೇಳುವ ನೋಟೀಸನ್ನು ದಿನಾಂಕ: 10.08.2022, 29.09.2022, 02.01.2024, 16.01.2024 ಹೊರಡಿಸಿ ಈ ನ್ಯಾಯಾಲಯದಿಂದ ವಾಹನದ ಮಾಲೀಕರು/ ವಾರಸುದಾರರು/ ಸಂಸ್ಥೆ ಇವರುಗಳ ಗಮನಕ್ಕೆ ತರಲಾಗಿರುತ್ತದೆ. ಈ ವಾಹನದ ಮಾಲೀಕತ್ವದ ಬಗ್ಗೆ ದಿನಾಂಕ: 18.08.2022 ರಂದು ನಡೆದ ವಿಚಾರಣೆಗೆ Syed Hafeez S/o Basha ರವರ ಪರವಾಗಿ ವಕೀಲರು ಹಾಜರಾಗಿ ಹೊಸಕೋಟೆ ಪೊಲೀಸ್ ಠಾಣೆಯ ಕ್ರೈಂ ನಂ.261/2019 ರಲ್ಲಿ ವಶಪಡಿಸಿಕೊಳ್ಳಲಾಗಿರುವ KA-05-M-8432 ಮಾರುತಿ ಓಮಿನಿ ವ್ಯಾನ ವಾಹನವನ್ನು ದಿನಾಂಕ:24.10.2014 ರಂದು ಮೋಹಿನ್ ಷರೀಫ್ ಬಿನ್ ದಸ್ತಗಿರ್ ಷರೀಫ್ ರವರಿಗೆ ಮಾರಾಟ ಮಾಡಿದ್ದು ತಮ್ಮ ಕಕ್ಷಿದಾರರಿಗೂ ಸದರಿ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲವೆಂದು ಲಿಖಿತ ಹೇಳಿಕೆ ನೀಡಿರುತ್ತಾರೆ ಹಾಗೂ ಈ ಸಂಬಂಧದ Delivery Note ಮಾಡಿಸಿರುವ ದಾಖಲೆಯನ್ನು ಈ ನ್ಯಾಯಾಲದಲ್ಲಿ ಸಲ್ಲಿಸಿರುತ್ತಾರೆ, ಅದರಂತೆ ಮೋಹಿನ್ ಷರೀಫ್ ಬಿನ್ ದಸ್ತಗಿರ್ ಷರೀಫ್ ಇವರಿಗೆ ವಿಚಾರಣೆಗೆ ಹಾಜರಾಗಲು ನೋಟೀಸ್ ನೀಡಲಾಗಿರುತ್ತದೆ. ಈ ನ್ಯಾಯಾಲಯದಲ್ಲಿ ದಿನಾಂಕ:29.09.2022 ರಂದು ನಡೆದ ವಿಚಾರಣೆಗೆ ಮೋಹಿನ್ ಷರೀಫ್ ಬಿನ್ ದಸ್ತಗಿರ್ ಷರೀಫ್ ಇವರ ಪರವಾಗಿ ವಕೀಲರಾದ ಶ್ರೀ ಪಯಾಜ್ ಅಹ್ಮದ್ ರವರು ಹಾಜರಾಗಿ ತಮ್ಮ ಕಕ್ಷಿದಾರರು ವಾಹನ ಸಂಖ್ಯೆ:KA-05-M-8432 ಓಮಿನಿ ಕಾರನ್ನು Syed Hafeez S/o Basha ರವರಿಂದ ಖರೀದಿಸಿದ್ದು ಸ್ವಂತ ಉಪಯೋಗಕ್ಕೆ ಬಳಸುತ್ತಿದ್ದರು ಎಂದು ಹೇಳಿಕೆ ನೀಡಿರುತ್ತಾರೆ.

3. ಅಭಿಯೋಜನೆ ಪರ ಸಾಕ್ಷಿಗಳ ವಿಚಾರಣೆಗಾಗಿ ಜರುಗಿರುವ ನಡಾವಳಿಗಳ ದಿನಾಂಕಗಳಂದು ವಾಹನದ ಮಾಲೀಕರು, ಉತ್ತರಾಧಿಕಾರಿಗಳು ದಿನಾಂಕ:29.09.2022 ರಂದು ಈ ನ್ಯಾಯಾಲಯದಲ್ಲಿ ನಡೆದ ವಿಚಾರಣೆಗೆ ಅವರ ಪರ ವಕೀಲರೊಂದಿಗೆ ಹಾಜರಾಗಿ ಸದರಿ ವಾಹನ ಸಂಖ್ಯೆ:KA-05-M-8432 ಓಮಿನಿ ಕಾರನ್ನು Syed Hafeez S/o Basha ರವರಿಂದ ಖರೀದಿಸಿದ್ದು ಸ್ವಂತ ಉಪಯೋಗಕ್ಕೆ ಬಳಸಲಾಗುತ್ತಿತ್ತು, ತಮ್ಮ ಊರಿನ ಕೆಲವರು ವೈಷಮ್ಯದಿಂದ ರಕ್ತಚಂದನದ ತುಂಡುಗಳನ್ನು ತಮ್ಮ ವಾಹನದಲ್ಲಿ ತುಂಬಿ ಪೊಲೀಸರಿಗೆ ಮಾಹಿತಿ ನೀಡಿರುತ್ತಾರೆ, ಆರೋಪಿತರು ಯಾವುದೇ ತಪ್ಪು ಮಾಡಿರುವುದಿಲ್ಲವೆಂದು ತಮ್ಮ ವಾಹನವನ್ನು ಬಿಡುಗಡೆಗೊಳಿಸಬೇಕೆಂದು ಈ ನ್ಯಾಯಾಲಯದಲ್ಲಿ ಕೋರಿರುತ್ತಾರೆ. ಆದರೆ ಅಭಿಯೋಜನೆ ಪರ ಸಾಕ್ಷಿದಾರರಾದ ಶ್ರೀ ಮಾರುತಿ ಜಿ. ಆರಕ್ಷಕ ಉಪ ನಿರೀಕ್ಷಕರು, ಅಪರಾಧ ವಿಭಾಗ ಹೊಸಕೋಟೆ ರವರು ದಿನಾಂಕ:18.08.2022 ಮತ್ತು 06.10.2022 ರಂದು ನಡೆದ ವಿಚಾರಣೆಗೆ ಹಾಜರಾಗಿ ತಾವು ಹೊಸಕೋಟೆ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ರಕ್ತಚಂದನ ಅಕ್ರಮ ಸಾಗಾಣಿಕೆ ಸಂಬಂಧ ವಾಹನ ಸಂಖ್ಯೆ:KA-05-M-8432 ಓಮಿನಿ ಕಾರನ್ನು ಮತ್ತು 15 ತುಂಡುಗಳನ್ನು ಅಮಾನತ್ತು ಪಡಿಸಿರುವುದು ನಿಜವಿರುತ್ತದೆಂದು ಹೇಳಿಕೆ ನೀಡಿರುತ್ತಾರೆ. ಹಾಗೂ ದಿನಾಂಕ:15.09.2022 ರಂದು ಈ ನ್ಯಾಯಾಲಯದಲ್ಲಿ ನಡೆದ ವಿಚಾರಣೆಗೆ ಪ್ರಕರಣದ ಸಾಕ್ಷಿದಾರರಾದ ಶ್ರೀ ಜವಾದ್ ಬಿನ್ ಪ್ಯಾರೇಜಾನ್, ಹೊಸಕೋಟೆ ರವರು ಹಾಜರಾಗಿ ದಿನಾಂಕ:01.08.2019 ರಂದು ಹೊಸಕೋಟೆ ಪೊಲೀಸ್ ಅಧಿಕಾರಿಗಳು ಹೊಸಕೋಟೆ ಟೌನ್ ಲ್ಯಾಂಕೋ ಟೋಲ್ ಬಳಿ ರಕ್ತ ಚಂದನ ಅಕ್ರಮ ಸಾಗಾಣಿಕೆ ಮಾಡುತ್ತಿದ್ದ KA-05-M-8432 ಸಂಖ್ಯೆಯ ಕಾರನ್ನು ಮತ್ತು ಒಟ್ಟು 238 ಕೆ.ಜಿ ರಕ್ತ

ಚಂದನವನ್ನು ಅಮಾನತ್ತು ಮಾಡಿ ಕೇಸ್ ದಾಖಲಿಸಿರುತ್ತಾರೆ, ಸದರಿ ದಿನದಂದು ಅಪರಾಧ ಪ್ರಕರಣ ನಡೆದಿರುವುದು ನಿಜವಾಗಿದ್ದು ಪೊಲೀಸ್ ಸಿಬ್ಬಂದಿಗಳು ಆರೋಪಿಗಳನ್ನು ಬಂಧಿಸಿ, ಕಾರನ್ನು ಮತ್ತು ಮಾಲನ್ನು ಅಮಾನತ್ತು ಪಡಿಸುವ ಸಮಯದಲ್ಲಿ ಹಾಜರಿದ್ದುದಾಗಿ ಈ ನ್ಯಾಯಾಲದಲ್ಲಿ ಹೇಳಿಕೆ ನೀಡಿರುತ್ತಾರೆ.

4. ಪ್ರಕರಣದ ವಾಸ್ತವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಹಾಗೂ ಲಭ್ಯವಿದ್ದ ವಿಷಯ ಸಾಮಗ್ರಿಗಳನ್ನು ಗಮನಿಸಿ ಪರಿಗಣಿಸಬೇಕಾದ ಅಂಶಗಳು ಈ ಕೆಳಗಿನಂತೆ ಇರುತ್ತದೆ.

1. ಮಾರುತಿ ಓಮಿನಿ ವ್ಯಾನ ವಾಹನದ ನೋಂದಣಿ ಸಂಖ್ಯೆ KA-05-M-8432 ಯನ್ನು ಬಳಿಸಿ ಒಟ್ಟು 238 ಕೆ.ಜಿ ತೂಕವುಳ್ಳ ರಕ್ತಚಂದನ ಮರದ 15 ತುಂಡುಗಳನ್ನು ಅಕ್ರಮವಾಗಿ ಸಾಗಿಸಿರುವುದು ಕಾನೂನು ವಿರುದ್ಧವಾಗಿ ಅರಣ್ಯ ಕಾಯ್ದೆ ನಿಯಮಗಳನ್ನು ಉಲ್ಲಂಘಿಸಲಾಗಿದೆಯೇ?
2. ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಬಿ) (1)ರ ಪ್ರಕಾರ ವಾಹನದ ಮಾಲೀಕರಿಗೆ ಕಾರಣ ಕೇಳುವ ನೋಟೀಸ್ ನೀಡಲಾಗಿದೆಯೇ? ಹಾಗೂ ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು /ಸಮರ್ಥಿಸಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಲಾಗಿದೆಯೇ?
3. ವಾಹನದ ಮಾಲೀಕರು 238 ಕೆ.ಜಿ ತೂಕವುಳ್ಳ ರಕ್ತಚಂದನ ಮರದ 15 ತುಂಡುಗಳನ್ನು (ಅರಣ್ಯೋತ್ಪನ್ನ) ಸಾಗಿಸುವಲ್ಲಿ ಶಾಮೀಲಾಗಿದ್ದಾರೆ ಅಥವಾ ವಾಹನದ ಚಾಲಕ ಇಂತಹ ಅಕ್ರಮ ಕಾನೂನುಬಾಹಿರ ಕೃತ್ಯಗಳನ್ನು ಎಸಗದಂತೆ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡಿದ್ದಾರೆಯೇ?
4. ಪ್ರಕರಣದಲ್ಲಿ ಅಮಾನತ್ತುಪಡಿಸಿದ 238 ಕೆ.ಜಿ ತೂಕವುಳ್ಳ ರಕ್ತಚಂದನ ಮರದ 15 ತುಂಡುಗಳು ಅರಣ್ಯ ಸ್ವತ್ತು ಎಂದು ಅರಣ್ಯ ಕಾಯ್ದೆಯಡಿ ಸರ್ಕಾರಕ್ಕೆ ಸೇರಿದ್ದು ಎಂಬುದಾಗಿ ಅಭಿಯೋಜನೆ ರುಜುವಾತು ಪಡಿಸಿದೆಯೇ?
5. ಅಮಾನತ್ತುಗೊಂಡು ವಾಹನ ಮತ್ತು ಅರಣ್ಯೋತ್ಪನ್ನ ಸರ್ಕಾರಕ್ಕೆ 'ಮುಟ್ಟುಗೋಲು' ಹಾಕಿಕೊಳ್ಳಬಹುದೇ?
6. ಯಾವ ಆದೇಶ ಅಥವಾ ತೀರ್ಪು?

ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ 01 ಮತ್ತು 02 : ಸಕಾರಾತ್ಮಕವಾಗಿದೆ.

ಅಂಶ 03 : ನಕಾರಾತ್ಮಕವಾಗಿದೆ.

ಅಂಶ 04 ಮತ್ತು 05 : ಸಕಾರಾತ್ಮಕವಾಗಿದೆ.

ಅಂಶ 06 : ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ

ಕಾರಣಗಳು

ಅಂಶ 01 ರಿಂದ 05 ಒಂದಕ್ಕೊಂದು ಪರಸ್ಪರ ಸಂಬಂಧಿಸಿದ್ದು, ಕಾರಣ ವಾಸ್ತವಾಂಶದ ಪುನರಾವರ್ತನೆಯನ್ನು ತಡೆಯಲು ಒಟ್ಟಾಗಿ ಚರ್ಚಿಸಲಾಗಿದೆ.

5. ದಿನಾಂಕ:01.08.2019 ರಂದು ಹೊಸಕೋಟೆ ಪೊಲೀಸ್ ಠಾಣೆ ವ್ಯಾಪ್ತಿಯ ಹೊಸಕೋಟೆ ಟೌನ್ ಲ್ಯಾಂಕೋ ಟೋಲ್ ಬಳಿ ಕಟ್ಟಿಗೇನಹಳ್ಳಿ ಗ್ರಾಮದ ವಾಸಿಗಳಾದ 1) ಮೋಹಿನ್ ಷರೀಫ್ ಬಿನ್ ದಸ್ತಗಿರ್ ಷರೀಫ್, 2) ಅಸಾದ್ ಷರೀಫ್ ಬಿನ್ ಖಾಸಿಂ ಷರೀಫ್, ರವರು ರಕ್ತಚಂದನ ಮರದ 15 ತುಂಡುಗಳನ್ನು ಅಕ್ರಮವಾಗಿ KA-05-M-8432 ಸಂಖ್ಯೆಯ ಓಮಿನಿ ವ್ಯಾನನಲ್ಲಿ ಸಾಗಣೆ ಮಾಡುತ್ತಿದ್ದು ಅವುಗಳ ಒಟ್ಟು ತೂಕ 238 ಕೆ.ಜಿ. ಇರುವುದು ಕಂಡುಬಂದಿರುತ್ತದೆ. ರಕ್ತಚಂದನ ಮರದ ತುಂಡುಗಳನ್ನು ಪರವಾನಗಿ /ರಹದಾರಿ ಪತ್ರ ಇಲ್ಲದೇ ಅಕ್ರಮವಾಗಿ ಸಾಗಣೆ ಮಾಡುತ್ತಿರುವ ಆರೋಪದ ಮೇಲೆ ಹೊಸಕೋಟೆ ಪೊಲೀಸ್ ಠಾಣೆಯಿಂದ ಮಾಲು ಮತ್ತು ಸಾಗಾಣಿಕೆಗೆ ಬಳಸಿದ ವಾಹನವನ್ನು ಜಪ್ತಿ ಪಡಿಸಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ. ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ರಡಿಯಲ್ಲಿ

ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಹೊಸಕೋಟೆ ಪೊಲೀಸ್ ಠಾಣೆ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿರುತ್ತಾರೆ.

6. ಅಭಿಯೋಜನೆಯವರ ಪರ ಪ್ರಕರಣದ ಸಾಕ್ಷಿದಾರರಾದ ಶ್ರೀ. ಮಾರುತಿ ಜಿ. ಪೊಲೀಸ್ ಸಬ್ ಇನ್ಸ್ ಪೆಕ್ಟರ್, ಕ್ಯೆಂ(ನಿವೃತ್ತ), ಹೊಸಕೋಟೆ ಪೊಲೀಸ್ ಠಾಣೆ ಇವರು ದಿನಾಂಕ:18.08.2022 ಮತ್ತು 06.10.2022 ರಂದು ನಡೆದ ವಿಚಾರಣೆಗೆ ಸಾಕ್ಷಿದಾರರಾಗಿ ನ್ಯಾಯಾಲಯದಲ್ಲಿ ತಮ್ಮ ಸಾಕ್ಷಿ ವಿಚಾರಣೆ ವೇಳೆ ಪಂಚನಾಮೆಯಲ್ಲಿನ ಮತ್ತು ಪಿರ್ಯಾದಿ ಮಾಡಿರುವ ವರದಿಯಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ದಿನಾಂಕ:01.08.2019 ರಂದು ತಾನು ಠಾಣೆಯಲ್ಲಿದ್ದಾಗ, ಮಾಲೂರು ಕಡೆಯಿಂದ ಬೆಂಗಳೂರು ಕಡೆಗೆ KA-05-M-8432 ವಾಹನದಲ್ಲಿ ರಕ್ತಚಂದನ ಅಕ್ರಮವಾಗಿ ಸಾಗಿಸುತ್ತಿರುವ ಬಗ್ಗೆ ತನಗೆ ಬಂದ ಮಾಹಿತಿ ಮೇರೆಗೆ ಹೊಸಕೋಟೆ ಪೊಲೀಸ್ ಸಿಬ್ಬಂದಿ ಮತ್ತು ಪಂಚಾಯ್ತುದಾರರೊಂದಿಗೆ ಮದ್ಯಾಹ್ನ 3-30 ಗಂಟೆಗೆ ಹೊಸಕೋಟೆ ಟೌನ್ ಲ್ಯಾಂಕೋ ಟೋಲ್ ಬಳಿ ಕಾಯುತ್ತಿದ್ದಾಗ, ಕೋಲಾರ-ಬೆಂಗಳೂರು ಎನ್ ಹೆಚ್-75 ರಸ್ತೆಯಲ್ಲಿ ಬರುತ್ತಿದ್ದ KA-05-M-8432 ಮಾರುತಿ ಓಮಿನಿ ವ್ಯಾನನ್ನು ತಡೆದು ನಿಲ್ಲಿಸಿ ಪಂಚರ ಸಮಕ್ಷಮ ಪರಿಶೀಲನೆ ನಡೆಸಿದಾಗ ಸದರಿ ವ್ಯಾನಿನಲ್ಲಿ ಒಟ್ಟು 238 ಕೆ.ಜಿ ತೂಕದ 15 ರಕ್ತ ಚಂದನ ಮರದ ತುಂಡುಗಳು ಕಂಡುಬಂದಿರುವುದು ನಿಜವಿರುತ್ತದೆ. ಪ್ರಕರಣದ ಎ1 ಮೋಹಿನ್ ಷರೀಫ್ ಬಿನ್ ದಸ್ತಗಿರ್ ಷರೀಫ್, ಎ2 ಅಸಾದ್ ಷರೀಫ್ ಬಿನ್ ಖಾಸಿಂ ಷರೀಫ್ ಇವರನ್ನು ಕೂಡಲೇ ಬಂಧಿಸಿ ವಿಚಾರಣೆ ನಡೆಸಲಾಗಿ ಕಟ್ಟಿಗೇನಹಳ್ಳಿ ಗ್ರಾಮದ ವಾಸಿ ಉಸ್ಮಾನ್ ಷರೀಫ್ ಅವರು ವ್ಯಾನಿನಲ್ಲಿ ರಕ್ತಚಂದನದ ತುಂಡುಗಳನ್ನು ಲೋಡ್ ಮಾಡಿಸಿಕೊಟ್ಟು, ನೀವು ವ್ಯಾನಿನಲ್ಲಿ ನೆಲಮಂಗಲ ಟೋಲ್ ಹತ್ತಿರ ತೆಗೆದುಕೊಂಡು ಹೋಗಿ ತಾನು ಬೈಕ್ ನಲ್ಲಿ ಹಿಂಬಾಲಿಸುತ್ತೇನೆಂದು ಹೇಳಿ ತಲಾ 2 ಸಾವಿರ ಕೊಟ್ಟು ಕಳುಹಿಸಿದರೆಂದು ಹೇಳಿಕೆ ನೀಡಿರುತ್ತಾರೆ, ಸದರಿ ಹೇಳಿಕೆಯಂತೆ ಉಸ್ಮಾನ್ ಷರೀಫ್ ಬಿನ್ ಬಾಬು ಇವರನ್ನು ಪ್ರಕರಣದ ಮೂರನೇ ಆರೋಪಿಯನ್ನಾಗಿ ಪರಿಗಣಿಸಲಾಗಿರುತ್ತದೆ ಹಾಗೂ ಆರೋಪಿಗಳು ಸ್ವ ಇಚ್ಛಾ ಹೇಳಿಕೆಯಂತೆ ಮೂರನೇ ಆರೋಪಿ ಪತ್ತೆಗಾಗಿ ಕಟ್ಟಿಗೇನಹಳ್ಳಿ, ಮಾಲೂರು ಕಡೆಗಳಲ್ಲಿ ವಿಚಾರಿಸಿ ನೋಡಲಾಗಿ ಪ್ರಕರಣ ದಾಖಲಾಗಿರುವುದು ತಿಳಿದು ತಲೆಮರಿಸಿಕೊಂಡಿರುವುದುದಾಗಿ ತಿಳಿದು ಬಂದಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ.

7. ಸಾಕ್ಷಿ ವಿಚಾರಣೆಯ ವೇಳೆ ವಾಹನದ ಮಾಲೀಕರು ಗೈರು ಹಾಜರಾಗಿದ್ದು ಅಭಿಯೋಜನಪರ ನಡೆಸಲಾದ ಸಾಕ್ಷಿಗಳನ್ನು ಪಾಟೀ ಸವಾಲು ಮಾಡಿರುವುದಿಲ್ಲ, ರಕ್ತಚಂದನದ 15 ತುಂಡುಗಳನ್ನು ಅಕ್ರಮವಾಗಿ ಸಾಗಾಣಿಕೆ ಮಾಡಲು ಬಳಸಲಾಗಿದ್ದ ವಾಹನ ನೋಂದಣಿ ಸಂಖ್ಯೆ: KA-05-M-8432 ಮಾರುತಿ ಓಮಿನಿ ವ್ಯಾನ್ ವಾಹನದಲ್ಲಿ ಸಾಗಾಣಿಕೆ ಮಾಡಲಾದ ಸದರಿ ಅರಣ್ಯೋತ್ಪನ್ನದ ಮಾಲೀಕತ್ವವನ್ನು ಸಾಬೀತುಪಡಿಸಲು ವಾಹನದ ಮಾಲೀಕ ಅಥವಾ ಅವರ ಪರ ವಕೀಲರು ಸಾಕ್ಷಿ ವಿಚಾರಣೆ ವೇಳೆ ವಿಫಲರಾಗಿರುತ್ತಾರೆ.

8. ದಿನಾಂಕ:01.08.2019 ರಂದು ಹೊಸಕೋಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ, KA-05-M-8432 ಮಾರುತಿ ಓಮಿನಿ ವ್ಯಾನ್ ವಾಹನದಲ್ಲಿ ಕಟ್ಟಿಗೇನಹಳ್ಳಿ ಗ್ರಾಮದ ವಾಸಿಗಳಾದ 1)ಮೋಹಿನ್ ಷರೀಫ್ ಬಿನ್ ದಸ್ತಗಿರ್ ಷರೀಫ್, 2) ಅಸಾದ್ ಷರೀಫ್ ಬಿನ್ ಖಾಸಿಂ ಷರೀಫ್, ರಕ್ತಚಂದನ ಮರದ 15 ತುಂಡುಗಳನ್ನು ಪರವಾನಗಿ / ರಹದಾರಿ ಪತ್ರ ಇಲ್ಲದೇ ಅಕ್ರಮವಾಗಿ ಸಾಗಾಣಿಕೆ ಮಾಡುತ್ತೀರುವ ಆರೋಪದ ಮೇಲೆ ಹೊಸಕೋಟೆ ಪೊಲೀಸ್ ಠಾಣೆಯಿಂದ ಮಾಲು ಮತ್ತು ವಾಹನವನ್ನು ಜಪ್ತು ಪಡಿಸಿ ಹೊಸಕೋಟೆ ಪೊಲೀಸ್ ಠಾಣೆಯ ಸಿಬ್ಬಂದಿ ಕರ್ನಾಟಕ ಅರಣ್ಯ ಕಾಯ್ದೆ-1963 ರ ಕಲಂ 24, 62 ಮತ್ತು ಕರ್ನಾಟಕ ಅರಣ್ಯ ಅಧಿನಿಯಮ 1969ರ ಕಲಂ 144 145 ಜೊತೆಗೆ ಐಪಿಸಿ-1860 ಕಲಂ 379 ಉಲ್ಲಂಘನೆ ಮಾಡಿರುವುದಾಗಿ ಪ್ರಕರಣ ದಾಖಲಿಸಿಕೊಂಡಿದ್ದು, ಹೊಸಕೋಟೆ ಪೋಲೀಸ್ ಠಾಣೆಯವರು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆಯ ವ್ಯಾಪ್ತಿಯಲ್ಲಿ ಸೆರಿರುತ್ತದೆ.

9. ಸರ್ಕಾರದ ಪರ ಅಭಿಯೋಜನಾ ಸಾಕ್ಷಿದಾರರು ಮಾರುತಿ ಓಮಿನಿ ವ್ಯಾನ್ ವಾಹನ ನೊಂದಣಿ ಸಂಖ್ಯೆ: KA-05-M-8432 ರಲ್ಲಿ ಅಕ್ರಮವಾಗಿ ಒಟ್ಟು 238 ಕೆ.ಜಿ ತೂಕವುಳ್ಳ ರಕ್ತಚಂದನ ಮರದ 15 ತುಂಡುಗಳನ್ನು ಅಕ್ರಮವಾಗಿ ಸಾಗಣಿಕೆ ಮಾಡಿರುವುದು ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ರಕ್ತಚಂದನದ ಅರಣ್ಯೋತ್ಪನ್ನದ ಮಾಲೀಕತ್ವವನ್ನು ಸಾಭೀತುಪಡಿಸುವ ಅಥವಾ ಜಪ್ತಾದ ವಾಹನವು ಸದರಿ ಕೃತ್ಯದಲ್ಲಿ ಭಾಗಿಯಾಗದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಿರುವ ಬಗ್ಗೆ ವಾಹನದ ನೋಂದಣಿ ಮಾಲೀಕರು ಅಥವಾ ಅವರ ಪರ ವಕೀಲರು ನಿರೂಪಿಸಿರುವುದಿಲ್ಲ. ಸದರಿ ವಾಹನವು ಅರಣ್ಯೋತ್ಪನ್ನದ ಅಕ್ರಮ ಸಾಗಾಣಿಕೆಯಲ್ಲಿ ಭಾಗಿಯಾಗಿರುವುದಾಗಿ ಈ ನ್ಯಾಯಾಲಯಕ್ಕೆ ಮನದಟ್ಟಾಗಿರುತ್ತದೆ. ಹಾಗೂ ಪ್ರಕರಣವು ತುಂಬ ಹಳೆಯ ಪ್ರಕರಣವಾದ್ದರಿಂದ, ಅಮಾನತು ಪಡಿಸಿಕೊಂಡ ವಾಹನವು ಶಿಥಿಲವಾಗಿ ವಾಹನದ ಮೌಲ್ಯವನ್ನು ಕಳೆದುಕೊಳ್ಳುವ ಕಾರಣದಿಂದಾಗಿ ಹಾಗೂ ಜಪ್ತಾದ ರಕ್ತ ಚಂದನವು ಅರಣ್ಯ ಉತ್ಪನ್ನವಾದ ಕಾರಣ ಮೇಲ್ಕಂಡ 1,2 ಮತ್ತು4, 5 ಅಂಶಗಳು ಸಕಾರಾತ್ಮಕವಾದವುಗಳಾಗಿದ್ದು ಸದರಿ ವಾಹನವು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ನಿಯಮ 1969ರ ಉಲ್ಲಂಘನೆ ಮಾಡಿರುವುದು ಅಭಿಯೋಜನೆ ಪರ ಸಾಕ್ಷಿದಾರರ ಹೇಳಿಕೆಯಿಂದ ಸಂಶಯಾತೀತವಾಗಿ ಸಾಭಿತಾಗಿರುತ್ತದೆ.

10. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71(ಎ) (1) ಮೇರೆಗೆ ರಾಜ್ಯ ಸರ್ಕಾರ ಸ್ವತ್ತಾದ ರಕ್ತಚಂದನ ಮರದ 15 ತುಂಡುಗಳನ್ನು ಮತ್ತು ಮಾರುತಿ ಓಮಿನಿ ವ್ಯಾನ್ ವಾಹನ ನೋಂದಣಿ ಸಂಖ್ಯೆ: KA-05-M-8432 ರಲ್ಲಿ ಪರವಾನಗಿ ಇಲ್ಲದೆ ಸಾಗಿಸಿ ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ಅಧಿನಿಯಮ 1969ರ ನಿಯಮಗಳನ್ನು ಉಲ್ಲಂಘನೆ ಮಾಡಿರುವ ಕಾರಣಕ್ಕೆ ಹೊಸಕೋಟೆ ಪೋಲೀಸ್ ಠಾಣೆ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ಜಪ್ತಾದ ಮುದ್ದೆಮಾಲನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಹಾಜರುಪಡಿಸಿದ್ದು, ಅಂತಹ ಸ್ವತ್ತನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕಾನೂನಿನಡಿ ಅವಕಾಶವಿರುವ ಮೇರೆಗೆ ಸದರಿ ಪ್ರಕರಣದಲ್ಲಿ ಒಳಗೊಂಡಿರುವ ರಕ್ತಚಂದನ ಮರದ ತುಂಡುಗಳು ಹಾಗೂ ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆಯೆಂದು ಮನಗಂಡು ಅಂಶ 06 ಈ ಕೆಳಕಂಡಂತೆ:

ಆದೇಶ

ನಾನು ಡಾ. ಸಂತೋಷ ಕುಮಾರ್ ಜಿ, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ, ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71(ಎ) ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ (ಹೊಸಕೋಟೆ ಪೊಲೀಸ್ ಠಾಣೆ ಕ್ರೈಂ ನಂ.261/2019) ರಲ್ಲಿ ಒಳಗೊಂಡಿರುವ ಮಾರುತಿ ಓಮಿನಿ ವ್ಯಾನ್ ವಾಹನ ನೊಂದಣಿ ಸಂಖ್ಯೆ: KA-05-M-8432 ವಾಹನ ಹಾಗೂ ಒಟ್ಟು 238 ಕೆ.ಜಿ ತೂಕವುಳ್ಳ ರಕ್ತಚಂದನ ಮರದ 15 ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ: 03-09-2025ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಗಿದೆ.

'ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ'.

ಅಧಿಕೃತ ಅಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ಗ್ರಾಮಾಂತರ ವಿಭಾಗ,
ದೇವನಹಳ್ಳಿ

PR-1349

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 728 ವೆಚ್ಚ-12/2025
(ಇ-ಆಫೀಸ್ ಕಡತ)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:11.09.2025

ಅಧಿಸೂಚನೆ

ಶಾಸಕರ ಭವನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 106 ಸಂಖ್ಯೆಯ ವಾಹನ ಚಾಲಕರುಗಳಿಗೆ ಅಗತ್ಯವಿರುವ ಸಮವಸ್ತ್ರ ಬಟ್ಟೆ, ಹ್ಯಾಟ್ ಮತ್ತು ಹೊಲಿಗೆ ಸೇವೆಯನ್ನು ಮೆ:Jatti Tracks LLP, Orchards Apartment, Sadashiva nagara, Bangalore ಇವರಿಂದ ಹಾಗೂ ಷೂ, ಸಾಕ್ಸ್ ಮತ್ತು ಬೆಲ್ಟ್ ಇವುಗಳನ್ನು ಮೆ:ಬಾಟಾ ಇಂಡಿಯಾ ಲಿ., ಕಮರ್ಷಿಯಲ್ ಸ್ಟ್ರೀಟ್, ಬೆಂಗಳೂರು ಇವರಿಂದ ಒಟ್ಟಾರೆ ರೂ.15.00 ಲಕ್ಷಗಳ ವೆಚ್ಚದಲ್ಲಿ ನೇರವಾಗಿ ಸಂಗ್ರಹಣೆ ಮಾಡಿಕೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಕರ್ನಾಟಕ ವಿಧಾನಸಭೆ ಸಚಿವಾಲಯಕ್ಕೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಕರ್ನಾಟಕ ವಿಧಾನಸಭೆ ಸಚಿವಾಲಯವು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-1350

ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 810 ವೆಚ್ಚ-12/2025

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:22.09.2025

ಅಧಿಸೂಚನೆ

ಅಬಕಾರಿ ಸನ್ನದುಗಳನ್ನು ಇ-ಹರಾಜು ಮೂಲಕ ವಿಲೇವಾರಿ ಮಾಡಲು MSTC Limited ಸೇವೆಯನ್ನು ಪ್ರತಿ ಅರ್ಜಿದಾರರಿಂದ ಒಂದು ಬಾರಿ ಮಾತ್ರ Rs.1.000 + Applicable GST ಅನ್ನು ನೊಂದಣಿ ಶುಲ್ಕವಾಗಿ ಮತ್ತು Transaction Charge ಅನ್ನು ಬಿಡ್ ನ 0.42% + Applicable GST ರ ದರದಲ್ಲಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜಿ)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಅಬಕಾರಿ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಷರತ್ತುಗಳು:

1. ಇಲಾಖೆಯು ಬೇಡಿಕೆಯ ಬೇಡಿಕೆಗನುಗುಣವಾಗಿ ಅಗತ್ಯ ತಾಂತ್ರಿಕ ಸೌಲಭ್ಯಗಳನ್ನು ಒದಗಿಸತಕ್ಕದು.
2. ಬಿಡ್ ದಾರರಿಗೆ ವಿಧಿಸಲಾಗುವ ನೊಂದಣಿ ಶುಲ್ಕ ಮತ್ತು ವಹಿವಾಟು ಶುಲ್ಕ ಹೊರತುಪಡಿಸಿ ಇನ್ನು ಯಾವುದೇ ಹೆಸರಿನಲ್ಲಿ ಶುಲ್ಕವನ್ನು ನೀಡಲು ಕೋರುವಂತಿಲ್ಲ.
3. ಸರ್ಕಾರ ಅಥವಾ ಅಬಕಾರಿ ಇಲಾಖೆಗೆ ಯಾವುದೇ ಶುಲ್ಕ ನೀಡಲು ಕೋರುವಂತಿಲ್ಲ.
4. ಇಲಾಖೆ ಪರವಾಗಿ ಸಂಗ್ರಹಿಸುವ ಅರ್ಜಿ ಶುಲ್ಕ ಮತ್ತು ಇಎಂಡಿ ಮೊತ್ತವನ್ನು ನಿಗದಿತ ಸಮಯದಲ್ಲಿ ಇಲಾಖೆಗೆ ಹಸ್ತಾಂತರಿಸುವುದು.
5. ಇಲಾಖೆ ಅಧಿಕಾರಿ ಸಿಬ್ಬಂದಿಗಳಿಗೆ ಹಾಗೂ ಸಂಭಾವ್ಯ ಬಿಡ್‌ದಾರರಿಗೆ (Prospective Bidders) ಆಯಾ ಜಿಲ್ಲೆಗಳಲ್ಲಿ ತರಬೇತಿಯನ್ನು ನೀಡುವುದು.
6. ಬಿಡ್‌ದಾರರ ಮಾಹಿತಿ ಹಾಗೂ ಹರಾಜು ಪ್ರಕ್ರಿಯೆ ವಿವರಗಳ ಗೌಪ್ಯತೆಯನ್ನು ಸೋರಿಕೆಯಾಗದಂತೆ ಕ್ರಮವಹಿಸುವುದು.
7. ಹರಾಜು ಪ್ರಕ್ರಿಯೆ ಮುಗಿದ ನಂತರ ಎಲ್ಲಾ ದತ್ತಾಂಶವನ್ನು ಇಲಾಖೆಗೆ ಹಸ್ತಾಂತರಿಸುವುದು, ಯಾವುದೇ ದತ್ತಾಂಶವನ್ನು ತಮ್ಮ ಪೋರ್ಟಲ್ ನಲ್ಲಿ ಉಳಿಸಿಕೊಳ್ಳುವಂತಿಲ್ಲ.
8. ಇಲಾಖೆಯು ಅಭಿವೃದ್ದಿಪಡಿಸಿಕೊಳ್ಳುವ In house handling module ಗೆ ಅಗತ್ಯ ಇರುವ ಸಹಕಾರವನ್ನು ಒದಗಿಸುವುದು.
9. ಕಾಲಕಾಲಕ್ಕೆ ಇಲಾಖೆಯಿಂದ ನೀಡಲಾಗಿರುವ ಇತರೆ ನಿರ್ದೇಶಗಳನ್ನು ಪಾಲಿಸತಕ್ಕದು.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಅಬಕಾರಿ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(**ಕಾಂತಮ್ಮ ಎನ್.ಎಂ.**)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-1351

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 838 ವೆಚ್ಚ-12/2025
(ಇ-ಆಫೀಸ್ ಕಡತ)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:19.09.2025

ಅಧಿಸೂಚನೆ

ನಾಡಹಬ್ಬ ದಸರಾ - 2025 ರ ದೀಪಾಲಂಕಾರ ಮತ್ತು ವಸ್ತು ಪ್ರದರ್ಶನದ ಆವರಣದಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಪ್ರದರ್ಶನ ಮಳಿಗೆ ಸ್ಥಾಪಿಸುವ ಸಂಬಂಧದ ಕಾಮಗಾರಿಗಳನ್ನು ಒಟ್ಟಾರೆ ರೂ.9.50 ಕೋಟಿಗಳ ವೆಚ್ಚದಲ್ಲಿ ನೇರವಾಗಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಇಂಧನ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಇಂಧನ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-1352

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 843 ವೆಚ್ಚ-12/2025
(ಇ-ಆಫೀಸ್ ಕಡತ)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:23.09.2025

ಅಧಿಸೂಚನೆ

ತುಮಕೂರು ದಸರಾ-2025ರ ಉತ್ಸವ ಆಚರಣೆಗೆ ರೂ.2.00 ಕೋಟಿಗಳ ವೆಚ್ಚದಲ್ಲಿ ಅವಶ್ಯಕ ಸರಕು ಮತ್ತು ಸೇವೆಗಳನ್ನು ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ಇವರು ನೇರವಾಗಿ ಸಂಗ್ರಹಣೆ ಮಾಡಿಕೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-1353

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 857 ವೆಚ್ಚ-12/2025
(ಇ-ಆಫೀಸ್ ಕಡತ)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:19.09.2025

ಅಧಿಸೂಚನೆ

"ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ" ಗೆ ಅಗತ್ಯವಿರುವ ಸೇವೆಯನ್ನು ಕರ್ನಾಟಕ ಸ್ಟೇಟ್ ಮಾರ್ಕೇಟಿಂಗ್ ಕಮ್ಯೂನಿಕೆಶನ್ & ಅಡ್ವರ್ಟೈಸಿಂಗ್ ಲಿಮಿಟೆಡ್ (KSMC&A), ಸಂಸ್ಥೆ ಬೆಂಗಳೂರು ಇವರ ವತಿಯಿಂದ ರೂ.2,88,93,046/- ಗಳ ವೆಚ್ಚದಲ್ಲಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-1354
To.No. /2025

Office Of The
Addle. Chief Metropolitan
Magistrate Mayohall Unit
Bengalore

NOTIFICATION

It is hereby notified to the General public thet the following unclaimed vehicles are in the custody of Byappanahalli Police Sattion Bengalore, Which are seized under various NCR Cases.

Sl No	NCR No	P.F No	Vehicle No	Type	Engine No	Chassie No	Colour
1.	57/25	25/25	KA03 5084	Bajaj Auto	24M-94H-72824	24F-94H-72917	Black Colour
2.	57/25	25/25	KA-03 AA-7995	PAIGGIO	TBP2MBP3001208	MBX0002DFPC674506	G Yellow

3.	57/25	25/25	KA-03 9491	Bajaj Auto	24M96M64349	24F96M52322	Black & Yellow
4.	57/25	25/25	KA-03 A-9964	Bajaj Auto	AEMBH92249	24H BMH 31388	Black Yellow
5.	57/25	25/25	KA-05 A-1613	Bajaj Auto	24M96M53384	24F96M61371	Black
6.	57/25	25/25	KA-05 AD-3397	Auto	OK4PB1069300	MD6M14LK2C4A19371	Green Auto
7.	57/25	25/25	KA-01 AC-4627	Bajaj Auto	AFZWDM81935	MD2A45BZXDWM09167	Green
8.	57/25	25/25	KA-01 AE-9456	Bajaj Auto	AZZWFG10772	MD2A45B0FWG19587	Green
9.	57/25	25/25	KA-01 A-9741	Auto	AEMBKL10102	24FBKL94644	Black & Yellow
10.	57/25	25/25	KA-03 3994	Auto	22E-93J-16454	22C-93J-16145	Black
11.	57/25	25/25	CAN-6196	Auto	-	-	Black
12.	57/25	25/25	KA-01 AB-0398	Ford FIESTA	BM18796	-	White
13.	57/25	25/25	KA-02 HR-8741	Bajaj Plantina	DUMBPL90793	MD2DDD222VWB16124	Gray
14.	57/25	25/25	KA-04 EY-7507	Honda Aviator	JF21E0050887	ME4JF212H88014057	Gray
15.	57/25	25/25	KA-51 E-8831	Bajaj Pulsar	DHGBMJ35571	DHVBMJ37454	Black
16.	69/25	28/25	KA-04 JQ-2950	Honda Activa	JF50ET9211118	ME4JF50CBJT210954	Cream Colour
17.	113/24	70/24	KA-08 Y-2821	HONDA DIO	JF39EG0062566	ME4JF39HHKG037583	
18.	113/24	70/24	-	HONDA DIO	JFIIE6109566	Tampared	
19.	113/24	70/24	-	Honda Dio	JF39EGI004549	ME4JF39JDKG003049	

Any person having rights to claim the above vehicles shall approach to Byappanahalli Police with necessary documents within 30 days from the date of this publication, failing which the above vehicles will be confiscated to GOVERNAMENT.

Any claims received after the due date will not be entertained.

X Addle C.M.M Court, Bengalore

PR-1355

ಕರ್ನಾಟಕ ಸರ್ಕಾರ
ಕಂದಾಯ ಇಲಾಖೆ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ತುಮಕೂರು ಜಿಲ್ಲೆ, ತುಮಕೂರು

ಮಿನಿ ವಿಧಾನಸೌಧ, ದೂ:08162272480, ಇ-ಮೇಲ್: deo.tumkur@gmail.com

Comp. No.:797206 File No.:DDLRTK-TNL0RV/429/2025-TECH-DDLR-TUMKUR ದಿನಾಂಕ: 17/09/2025

ತುಮಕೂರು ಜಿಲ್ಲೆ, **ಕುಣಿಗಲ್** ತಾಲ್ಲೂಕು, **ಕೊತ್ತಗೆರೆ** ಹೋಬಳಿ, **ಹಾಲ್ಗೋನಹಳ್ಳಿ,** ಗ್ರಾಮದ ಸ.ನಂ-39/1, ರಲ್ಲಿ ದಾಖಲೆ ರಹಿತ ಜನವಸತಿ ಕೇಂದ್ರವು ಖಾಸಗಿ ಮಾಲೀಕತ್ವದ ಸರ್ವೆ ನಂಬರ್‌ನಲ್ಲಿರುವುದನ್ನು ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ರ 38ಎ ರನ್ವಯ ಸರ್ಕಾರದ ಹೆಸರಿಗೆ ನಿಹಿತಗೊಳಿಸಿ, **ಲಕ್ಷ್ಮೀನಾರಾಯಣಪುರ** ಎಂಬ ಉಪ ಗ್ರಾಮ ರಚನೆಯ 2-E ಅಧಿಸೂಚನೆ.

NOTIFICATION

"Form 2-E
[see sub-rule (3) of rule 9-B]

Whereas, the Assistant Commissioner of Tumkur sub division after conducting spot inspection has submitted a proposal for declaration of unrecorded habitation in respect of habitation situated at Tumakuru District, Kunigal Taluk, Kothagere Hobali, **HALGONAHALLI** Village.

I the Deputy Commissioner of Tumakuru District, having examined the said proposal of the Assistant Commissioner and having satisfied that the same meets the criterion prescribed to declare the said **LAKSHMINARAYANAPURA** unrecorded habitation as such, in exercise of the powers conferred under section 38A of the Karnataka Land Reforms Act,1961, hereby declare the following areas as an unrecorded habitation, namely:-

Name of Taluk	Name of the unrecorded habitation and name of original village under which it falls	S NO	Total extent of land on which unrecorded habitation **LAKSHMINARAYANAPURA** Is located (4)		Boundaries			
			Acre	Guntas	North	South	East	West
1	2	3	4(i)	4(ii)	5	6	7	8
KUNIGAL	**LAKSHMINARAYANAPURA (HALGONAHALLI)**	39/1	1	12	S,no, 25	S,no, 39/2	Remaining land of S,no,39/1 and 39/4	Road

It is hereby declared that this unrecorded habitation may here in after be named as **LAKSHMINARAYANAPURA village .**

And whereas in consequence of this declaration the extent of land indicated in the column (4) above with survey number specified in column (3) on which the said

unrecorded habitation is located vests absolutely in the state Government free from all encumbrance.

Provided that, any private land vested in the Government as per this notification is subject to the condition that any extent of such land occupied by the land owner himself for his residential and other domestic purpose, if identified or included in it, the same shall be restored to him by the Assistant Commissioner at the time of identifying eligible claimants for issuing title deeds to the habitants of the said unrecorded habitation.

Place: TUMAKURU "DEPUTY COMMISIONER"

By order and in the name of
The Governor of Karnataka

PR-1356

ಕರ್ನಾಟಕ ಸರ್ಕಾರ
ಕಂದಾಯ ಇಲಾಖೆ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ತುಮಕೂರು ಜಿಲ್ಲೆ, ತುಮಕೂರು

ಜಿಲ್ಲಾ ಆಡಳಿತ ಸೌಧ, ದೂ:08162272480, ಇ-ಮೇಲ್: deo.tumkur@gmail.com

Comp. No.: 807699 File No.:DDLRTK-TNL0RV/494/2025

ತುಮಕೂರು ಜಿಲ್ಲೆ, **ಗುಬ್ಬಿ** ತಾಲ್ಲೂಕು, **ಕಸಬ** ಹೋಬಳಿ, **ಮುದಿಗೆರೆ** ಗ್ರಾಮದ **ಸ.ನಂ 131/1** ರಲ್ಲಿ ದಾಖಲೆ ರಹಿತ ಜನವಸತಿ ಕೇಂದ್ರವು ಖಾಸಗಿ ಮಾಲೀಕತ್ವದ ಸರ್ವೆ ನಂಬರ್‌ನಲ್ಲಿರುವುದನ್ನು ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ರ 38ಎ ರನ್ವಯ ಸರ್ಕಾರದ ಹೆಸರಿಗೆ ನಿಹಿತಗೊಳಿಸಿ, **ಉಪ್ಪಾರಪಾಳ್ಯ** ಎಂಬ ಗ್ರಾಮಠಾಣ ರಚನೆಯ 2-E ಅಧಿಸೂಚನೆ.

"FORM 2-E"

[see sub-rule (3) of rule 9-B]

Whereas, the Assistant Commissioner of Tumkur sub-division after conducting spot inspection has submitted a proposal for declaration of unrecorded habitation in respect of habitation situated at **Mudigere, Kasaba Hobli, Gubbi Taluk, Tumkuru District.**

I the Deputy Commissioner of **Tumkuru** District, having examined the said proposal of the Assistant Commissioner and having satisfied that the same meets the criterion prescribed to declare the said **Upparapalya** unrecorded habitation as such, in exercise of the powers conferred under **Section 38A of the Karnataka Land Reforms Act, 1961 (Karnataka Act 10 of 1962)**, hereby declare the following areas as an unrecorded habitation, namely:-

Name of Taluk	Name of the unrecorded habitation and name of **original village** under which it falls	Survey no.	Total extent of land on which unrecorded habitation Upparapalya is located		Boundaries			
			Acres	Guntas	North	South	East	West
(1)	**(2)**	**(3)**	**(4)(i)**	**(4)(ii)**	**(5)**	**(5)**	**(7)**	**(8)**
GUBBI		**131/1**	**0**	**37(Total Extent)**	**S.no 131/2**	**S.no 130**	**S.no 131/2**	**S.no 129**
			0	0(Kharab)				

	Upparapalya (Mudigere)		**0**	**37 (Net extent)**				
TOTAL			0	37(Total Extent)				
			0	00(Kharab)				
			0	**37 (Net extent)**				

It is hereby declared that this unrecorded habitation may hereinafter be named as **Upparapalya** Village.And whereas in consequence of this declaration the extent of land indicated in the column (4) above with survey number specified in column (3) on which the said unrecorded habitation is located vests absolutely in the State Government free from all encumbrance.

Provided that, any private land vested in the Government as per this notification is subject to the condition that any extent of such land occupied by the land owner himself for his residential and other domestic purpose, if identified or included in it, the same shall be restored to him by the Assistant Commissioner at the time of identifying eligible claimants for issuing title deeds to the habitants of the said unrecorded habitation.

Place: Tumakuru.
Date: 17-09-2025

"DEPUTY COMMISSIONER"

By order and in the name of
the Governor of Karnataka

PR-1357

ಕರ್ನಾಟಕ ಸರ್ಕಾರ
ಕಂದಾಯ ಇಲಾಖೆ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ತುಮಕೂರು ಜಿಲ್ಲೆ, ತುಮಕೂರು

ಜಿಲ್ಲಾ ಆಡಳಿತ ಸೌಧ, ದೂ:08162272480, ಇ-ಮೇಲ್: deo.tumkur@gmail.com

Comp. No.:807604 File No.:DDLRTK-TNL0RV/492/2025-TECH-DDLR

ತುಮಕೂರು ಜಿಲ್ಲೆ, **ಗುಬ್ಬಿ** ತಾಲ್ಲೂಕು, **ಸಿ.ಎಸ್.ಪುರ** ಹೋಬಳಿ, **ಬುಕ್ಕಸಾಗರ** ಗ್ರಾಮದ **ಸ.ನಂ 128/2** ರಲ್ಲಿ ದಾಖಲೆ ರಹಿತ ಜನವಸತಿ ಕೇಂದ್ರವು ಖಾಸಗಿ ಮಾಲೀಕತ್ವದ ಸರ್ವೆ ನಂಬರ್‌ನಲ್ಲಿರುವುದನ್ನು ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ರ 38ಎ ರನ್ವಯ ಸರ್ಕಾರದ ಹೆಸರಿಗೆ ನಿಹಿತಗೊಳಿಸಿ **ಬುಕ್ಕಸಾಗರ ವಿಸ್ತರಣೆ** ಎಂಬ ಗ್ರಾಮಠಾಣ ರಚನೆಯ 2-E ಅಧಿಸೂಚನೆ.

"FORM 2-E"

[see sub-rule (3) of rule 9-B]

Whereas, the Assistant Commissioner of Tumkur sub-division after conducting spot inspection has submitted a proposal for declaration of unrecorded habitation in respect of habitation situated at **Bukkasagara village, Kadaba Hobli, Gubbi Taluk, Tumkuru District.**

I the Deputy Commissioner of **Tumkuru** District, having examined the said proposal of the Assistant Commissioner and having satisfied that the same meets the criterion prescribed to declare the said **Bukkasagara Extension** unrecorded habitation as such, in exercise of the powers conferred under **Section 38A of the Karnataka Land Reforms Act, 1961 (Karnataka Act 10 of 1962)**, hereby declare the following areas as an unrecorded habitation, namely:-

Name of Taluk	Name of the unrecorded habitation and name of **original village** under which it falls	Survey no.	Total extent of land on which unrecorded habitation **Bukkasagara** is located		Boundaries			
			Acres	Guntas	North	South	East	West
(1)	**(2)**	**(3)**	**(4)(i)**	**(4)(ii)**	**(5)**	**(5)**	**(7)**	**(8)**
GUBBI	**Bukkasagara Extension (Bukkasagara)**	**128/2**	00	35 (Total Extent)	S.NO. 127	S.NO. 129	S.NO. 14	S.NO. 128/1A, 1B
			00	00(Kharab)				
			00	35(Net extent)				
TOTAL			00	35(Total Extent)				
			00	00(Kharab)				
			00	**35 (Net extent)**				

It is hereby declared that this unrecorded habitation may hereinafter be named as **Bukkasagara** Village.

And whereas in consequence of this declaration the extent of land indicated in the column (4) above with survey number specified in column (3) on which the said unrecorded habitation is located vests absolutely in the State Government free from all encumbrance.

